ಭಾರತದಲ್ಲಿ ಶಿಕ್ಷಣದ ಹಕ್ಕಿನ ವೆಚ್ಚ ಮತ್ತು ಹಣಕಾಸು: ನಾವು ಹಣಕಾಸಿನ ಅಂತರವನ್ನು ತುಂಬಬಹುದೇ?

ಮೂಲ: ಸಂತೋಷ್ ಮೆಹ್ರೊತ್ರ

ಭಾರತದ ಸಂಸತ್ತು 2009ರಲ್ಲಿ ಜಾರಿಯಲ್ಲಿ ತಂದ ಶಿಕ್ಷಣ ಹಕ್ಕು ಕಾಯಿದೆಯು 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಕನಿಷ್ಠ 8 ವರ್ಷಗಳವರೆಗೆ ಶಾಲಾ ಸೇರ್ಪಡೆಗೆ ಅವಕಾಶ ಕಲ್ಪಿಸಿದೆ. ಈ ಲೇಖನವು ಶಿಕ್ಷಣದ ಹಕ್ಕನ್ನು ಸಾಧಿಸುವಾಗ ತಗಲುವ ವೆಚ್ಚವನ್ನು ಪರಿಶೀಲಿಸುತ್ತದೆ ಹಾಗೂ ಒಂದು ವೇಳೆ ಶಿಕ್ಷಣದ ಹಕ್ಕು ನೆರವೇರಲ್ಪಟ್ಟರೆ ಭಾರತ ಏನಾದರೂ ಹಣಕಾಸಿನ ಅಂತರವನ್ನು ತುಂಬಬಹುದೇ ಎಂಬುದನ್ನು ತಿಳಿಸುತ್ತದೆ. ಕಾಯಿದೆಯ ಮೇರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಣಕಾಸು ಹಂಚಿಕೆಯಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿರುವುದನ್ನು ಗಮನಿಸುವುದರ ಜೊತೆಗೆ ಲೇಖನವು ಸಂಪನ್ಮೂಲಗಳನ್ನು ಪತ್ತೆ ಹಚ್ಚುವಾಗ ಕಂಡು ಬರುವ ತೊಂದರೆಗಳನ್ನು, ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ಸಂಭವಿಸುವ ದೊಡ್ಡ ಪ್ರಮಾಣದ ವಿತ್ತೀಯ ಕೊರತೆಯನ್ನು ಗುರುತಿಸಿದೆ. ಆದಾಗ್ಯೂ ಲೇಖನವು ಶಿಕ್ಷಣದ ಹಕ್ಕಿಗಾಗಿ ತೆಗೆದುಕೊಳ್ಳಬಹುದಾದ ಕ್ರಮಗಳ ಸರಣಿಯನ್ನು ಸೂಚಿಸುತ್ತದೆ. ಹೀಗಾಗಿ ಶಾಲಾ ಸೇರ್ಪಡೆಯ ಹಕ್ಕನ್ನು ನಿರಾಕರಿಸುವಂತಿಲ್ಲ ಇಲ್ಲವೆ ತಡಮಾಡುವ ಆಗಿಲ್ಲ.

2001ರಲ್ಲಿ ಭಾರತದಲ್ಲಿನ ಅನಕ್ಷರಸ್ತರ ಸಂಖ್ಯೆ ಸ್ವಾತಂತ್ರ್ಯದ ಸಮಯದಲ್ಲಿದ್ದ (1947) ರಾಷ್ಟ್ರದ ಒಟ್ಟು ಜನಸಂಖ್ಯೆಗಿಂತ ಹೆಚ್ಚಾಗಿತ್ತು. ಎರಡನೇ ಪಂಚವಾರ್ಷಿಕ ಯೋಜನೆಯ (1957–62) ನಂತರ ಅಸ್ತಿತ್ವದಲ್ಲಿದ್ದ ನೀತಿಗಳು ಮತ್ತು ಹಣಕಾಸಿನ ಮಾದರಿಗಳ ಫಲವಾಗಿ ಅನಕ್ಷರಸ್ಥ ಜನಸಂಖ್ಯೆ ಸುಮಾರು 350 ದಶಲಕ್ಷದಷ್ಟಾಯಿತು. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣದ ಅವಶ್ಯಕತೆಯನ್ನು ಗಂಭೀರವಾಗಿ ಪರಿಗಣಿಸಲಾಗಿತ್ತು. ಆದರೆ ನೀತಿ ನಿರೂಪಕರ ಆದ್ಯತೆಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕಿಂತ ಉನ್ನತ ಮತ್ತು ತಾಂತ್ರಿಕ ಶಿಕ್ಷಣವು ಮೇಲುಗೈ ಸಾಧಿಸಲು ಪ್ರಾರಂಭಿಸಿತು. ಅಂದರೆ ನೀತಿ ನಿರೂಪಕರು ಉನ್ನತ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಿದರು. ಇಂತಹ ಸವಕಲು ದೃಷ್ಟಿಕೋನದಿಂದಾಗಿ ದೇಶ ಈಗಲೂ ತಕ್ಕದಾದ ಬೆಲೆಯನ್ನು ತೆರುವಂತಾಗಿದೆ ಹಾಗೂ ಬಡವರನ್ನು ನಿರ್ದಿಷ್ಟವಾಗಿ ಪ್ರಾಥಮಿಕ ಶಿಕ್ಷಣದ ಫಲದಿಂದ ಹೊರಗಿಡುವಂತಾಗಿದೆ. ಈಗಾಗಲೇ ಹೆಚ್ಚು ಸಾಮಾಜಿಕವಾಗಿ ಶ್ರೇಣಿಕೃತಗೊಂಡಿರುವ ಸಮಾಜವನ್ನು ಪ್ರಾಥಮಿಕ ಶಿಕ್ಷಣದಿಂದ ಹೊರಗಿಟ್ಟಿರುವುದು ರಾಷ್ಟ್ರದಲ್ಲಿನ ದೀರ್ಘಕಾಲದ ಬಡತನದ ಸಾಮೂಹಿಕ ಪ್ರಮಾಣಕ್ಕೆ ಕಾರಣವಾಗಿದೆ. ಉದಾಹರಣೆಗೆ, 2004–2005ರಲ್ಲಿ ಭಾರತದಲ್ಲಿ 300 ದಶಲಕ್ಷದಷ್ಟಿದ್ದ ಅನಕ್ಷರಸ್ಥರ ಸಂಖ್ಯೆಗಿಂತ (ಯೋಜನಾ ಆಯೋಗದಿಂದ ಅಂದಾಜು ಮಾಡಿದಂತೆ) ಬಡವರ ಸಂಖ್ಯೆ ಭಿನ್ನವಾಗಿಲ್ಲ. ಅಂದರೆ ಬಹುತೇಕ ಬಡವರೆಲ್ಲರೂ ಅನಕ್ಷರಸ್ಥರಾಗಿದ್ದಾರೆ ಎಂಬುದನ್ನು ಇದು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಶಿಕ್ಷಣದ ಹಕ್ಕನ್ನು ತುರ್ತಾಗಿ ನೀಡುವ ಅಗತ್ಯವಿದೆ. ಭಾರತ ಸಾಂವಿಧಾನಿಕ ನಿರ್ದೇಶನದನ್ವಯ ಸ್ವಾತಂತ್ರ್ಯದಿಂದ 10 ವರ್ಷಗಳ ಅವಧಿಯೊಳಗೆ 6–14 ವರ್ಷ ವಯಸ್ಸಿನವರಿಗೆ ಶಾಲಶಿಕ್ಷಣವನ್ನು ಸಾರ್ವತ್ರಿಕಗೊಳಿಸುವಲ್ಲಿ ಹಿಂದೆ ಬಿದ್ದಿದೆ ಹಾಗು ಈಗಾಗಲೇ ಅರ್ಧ ಶತಮಾನದಷ್ಟು ತಡವಾಗಿ ಹೋಗಿದೆ.

ಶಿಕ್ಷಣದ ಹಕ್ಕನ್ನು ಎರಡು ರೀತಿಯಲ್ಲಿ ಅಂದರೆ ತಕ್ಷಣ ಮತ್ತು ಹಂತಹಂತವಾಗಿ ಪಡೆಯಬಹುದು. ಹಿಂದಿನ ಉದಾಹರಣೆಯೆಂದರೆ ಭಾರತದಲ್ಲಿನ ಮಾಹಿತಿ ಹಕ್ಕು (2005ರಿಂದ ಇದು ಕಾನೂನಿನಲ್ಲಿ ಸೇರ್ಪಡೆಗೊಂಡಿದೆ). ಅಲ್ಲಿ ಹಕ್ಕಿನ ವಿವಿಧ ನಿಬಂಧನೆಗಳನ್ನು ಜಾರಿಗೊಳಿಸುವುದನ್ನು ಹೊರತುಪಡಿಸಿ, ಸರ್ಕಾರಿ ಇಲಾಖೆಗಳಲ್ಲದೆ ಬೇರೆ ಕಡೆ ನಾಗರೀಕನು ತನ್ನ ಹಕ್ಕನ್ನು ಚಲಾಯಿಸುವುದನ್ನು ಶಕ್ತಗೊಳಿಸಲು ಕೆಲವು ಕ್ರಮಗಳನ್ನು ಅನುಸರಿಸುವ ಅಗತ್ಯ ಹೆಚ್ಚಾಗಿ ಕಂಡುಬರುವುದಿಲ್ಲ.

ಮತ್ತೊಂದೆಡೆ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು ದ್ವಿತೀಯ ವರ್ಗಕ್ಕೆ ಸೇರಿವೆ. ಅಲ್ಲಿ ಸರ್ಕಾರವು ಹಂತಹಂತವಾಗಿ ಅವುಗಳನ್ನು ಸಂರಕ್ಷಿಸುವ, ಉತ್ತೇಜಿಸುವ ಮತ್ತು ಸಾಮಾಜಿಕವಾಗಿ ಬಿಗಿಗೊಳಿಸುವ ಕೆಲಸವನ್ನು ಮಾಡುತ್ತದೆ (ಬ್ಯಾನರ್ಜಿ ಮತ್ತು ಮುಖರ್ಜಿ – 2008). ಅಧಿಕೃತ ಗೆಜೆಟ್ಟಿನ ನಿಜವಾದ ಪ್ರಕಟಣೆಯಲ್ಲಿ ಯಾವುದೇ ಸ್ಥಳವಿಲ್ಲದಿದ್ದರೂ ಹಂತಹಂತ (ಕ್ರಮೇಣ) ಎಂಬ ಪದವು ಬಳಸಲ್ಪಡುತ್ತದೆ. ಇದರಿಂದಾಗಿ ಶಿಕ್ಷಣದ ಹಕ್ಕು ಮೊದಲನೇಯ ವರ್ಗದಲ್ಲಿ ಸೇರ್ಪಡೆಯಾಗಿರುವ ಅಂಶ ಕೂಡ ನಮಗೆ ತಿಳಿಯುತ್ತದೆ. ಇದು ಕರ್ತವ್ಯ – ಧಾರಕನ (ಅಂದರೆ ಸರ್ಕಾರ) ಮೇಲೆ ತಕ್ಷಣದ ನೇರ ಹಣಕಾಸಿನ ಹೊರೆಯನ್ನು ಇರಿಸುತ್ತದೆ. ಇಲ್ಲಿ ಹಣವು ಎಲ್ಲಿಂದ ಬರತ್ತದೆ ಎಂಬುದು ಚರ್ಚೆಯ ಪ್ರಮುಖ ಅಂಶವಾಗಿದೆ. ಇದರ ಮಾರ್ಗಗಳನ್ನು ಗುರುತಿಸುವುದು ಮತ್ತು ತುರ್ತುವಾದದ ಸಂದರ್ಭದಲ್ಲಿ ಅವುಗಳನ್ನು ಹೊಂದಿಸುವುದು ಈ ಲೇಖನದ ಪ್ರಮುಖ ಅಂಶವಾಗಿದೆ.

ಅಂತರರಾಷ್ಟ್ರೀಯ ಅನುಭವದಲ್ಲಿ ಹೇಳುವುದಾದರೆ, ಜೋಮ್ಟೇನ್ ಸಮ್ಮೇಳನದಿಂದಲೂ (1980) ಎಲ್ಲರಿಗೂ ಶಿಕ್ಷಣವೆಂಬ ಕರೆಗಳನ್ನು ನೀಡಲಾಗಿತ್ತು. ಆದರೆ ಈ ಕರೆಗಳು ತಮ್ಮ ಗುರಿಗಳನ್ನು ಪೂರೈಸಲು ವಿಫಲವಾದವು, ಎಕೆಂದರೆ, ಬಿಲ್ ಪಾವತಿಸುವವರು ಯಾರು ಎಂಬುದನ್ನು ಆ ಕರೆಗಳಲ್ಲಿ ಉದ್ದೇಶಿಸಿರಲಿಲ್ಲ. ಸಂವಿಧಾನದ ರಾಜ್ಯ ನೀತಿ ಮಾರ್ಗದರ್ಶಿ ತತ್ವಗಳಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕೀಕರಣಗೊಳಿಸುವಿಕೆಯನ್ನು 10 ವರ್ಷದೊಳಗೆ ಸಾಧಿಸಬೇಕಾದ ಅವಶ್ಯಕತೆ ಇದೆ ಎಂಬ ಬೇಡಿಕೆಗಳ ಬಗ್ಗೆ ಭಾರತವು ಒಂದು ಉತ್ತಮ ಉದಾಹರಣೆಯಾಗಿದೆ, ಆದರೆ 1950ರಲ್ಲಿ ಸಂವಿಧಾನವನ್ನು ಘೋಷಿಸಿದ ಆರು ದಶಕಗಳ ನಂತರವೂ ಪ್ರಾಥಮಿಕ ಶಿಕ್ಷಣ (ಅಂದರೆ., ವರ್ಗ 8 ರವರೆಗೆ) ಇನ್ನೂ ದಾಖಲಾತಿಗೆ ಸಂಬಂಧಿಸಿದಂತೆ ಅಥವಾ ಸೇರಿಕೊಂಡವರಲ್ಲಿ ಪೂರ್ಣಗೊಳ್ಳುವ ಪರಿಭಾಷೆಯಲ್ಲಿ ಸಾರ್ವತ್ರಿಕೀಕರಣಗೊಂಡಿಲ್ಲ.

ಭಾರತೀಯ ಸಂವಿಧಾನದ ನಿರ್ದೇಶನ ತತ್ವಗಳು ಕಡ್ಡಾಯವಾಗಿಲ್ಲವಾದರೂ, ಅದೇ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ಅಳವಡಿಸಲಾಗಿದೆ ಹಾಗೂ ಅವುಗಳ ಉಲ್ಲಂಘನೆ ದಂಡವನ್ನು ಆಹ್ವಾನಿಸುತ್ತದೆ. 2002ರಲ್ಲಿ ಭಾರತೀಯ ಸಂಸತ್ತು ಸಂವಿಧಾನದ 86 ನೇ ತಿದ್ದುಪಡಿಯ ಕಾಯಿದೆಯನ್ನು ಜಾರಿಗೊಳಿಸಿತು. ಇದು ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಅನುಚ್ಛೇದ 21 'ಎ' ಯನ್ನು ಸೇರಿಸುವ ಮೂಲಕ ಉಚಿತ ಮತ್ತು ಕಡ್ಡಾಯ ಶಿಕ್ಷಣದ ನಿಬಂಧನೆಯನ್ನು ಕಡ್ಡಾಯಗೊಳಿಸಿತು. ಇದರ ಪ್ರಕಾರ " ಸರ್ಕಾರವು 6–14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕು" ಎಂಬುದನ್ನು ಕಾನೂನು ಪ್ರಕಾರ ನಿರ್ಧರಿಸಲಾಗಿದೆ. ಮೂಲಭೂತ ಹಕ್ಕುಗಳ ಅಧ್ಯಾಯದಲ್ಲಿನ 21 'ಎ' ಅನುಚ್ಛೇದವು ರಾಜ್ಯ ನೀತಿ ನಿರ್ದೇಶಕ ತತ್ವಗಳಲ್ಲಿನ 45ನೇ ವಿಧಿಯನ್ನು ಬದಲಿಸಿದೆ. ಈ ವಿಧಿಯ ಪ್ರಕಾರ "ಸರ್ಕಾರವು 14 ವರ್ಷ ವಯಸ್ಸಿನತನಕ ಎಲ್ಲಾ ಮಕ್ಕಳಿಗೆ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಒದಗಿಸಲು ಪ್ರಯತ್ನಿಸುತ್ತದೆ". ಆದರೆ 86 ನೆಯ ಸಂವಿಧಾನಾತ್ಮಕ ತಿದ್ದುಪಡಿಯು " ಇದು ಕೇಂದ್ರ ಸರ್ಕಾರ ಅಧಿಸೂಚನೆಯನ್ನು ಅಧಿಕೃತ ಗೆಜೆಟ್ನಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರಲಿದೆ" ಎಂದು ಶಾಸಿಸುತ್ತದೆ. ದುರದೃಷ್ಟವಶಾತ್, ಈ ಅಧಿಸೂಚನೆಯು ಹೊರಬರಲಿಲ್ಲ. ಹೀಗಾಗಿ 86 ನೇ ಸಾಂವಿಧಾನಿಕ ತಿದ್ದುಪಡಿಯು ಜಾರಿಗೆ ಬರಲಿಲ್ಲ. ಈ ಕಾರಣದಿಂದಾಗಿ ಇಂದು ಶಿಕ್ಷಣದ ಹಕ್ಕು ಮಸೂದೆಯ ಅವಶ್ಯಕತೆ ಉದ್ಭವವಾಗಿದೆ.

ಮಧ್ಯಂತರದ ಅವಧಿಯಲ್ಲಿ(2002–2009) ಶಿಕ್ಷಣ ಹಕ್ಕು ಮಸೂದೆಯ ವಿರುದ್ಧ ಅನೇಕ ವಾದಗಳನ್ನು ಮಾಡಲಾಗಿತ್ತು. ಉದಾಹರಣೆಗೆ, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲು ಭಾರತದ ಕೆಲವು ರಾಜ್ಯಗಳಿಗೆ ಸಂಪನ್ಮೂಲಗಳು ಅಡಚಣೆಯಾಗಿಲ್ಲ ಎಂದು ಸೂಚಿಸಲಾಗಿತ್ತು. ಅಂದರೆ ಈ ಉದ್ದೇಶದ ಸಾಧನೆಗೆ ಸಂಪನ್ಮೂಲಗಳ ಕೊರತೆಯಿರಲಿಲ್ಲ. ಕೇರಳ, ಹಿಮಾಚಲ ಪ್ರದೇಶ, ಮಿಜೋರಾಂ ಮತ್ತು ತಮಿಳುನಾಡು ಮುಂತಾದ ರಾಜ್ಯಗಳು ಈಗಾಗಲೇ ಯಾವುದೇ ಪ್ರಸ್ತಾವಿತ

ಶಾಸನವಿಲ್ಲದೆ ದೊಡ್ಡ ಪ್ರಮಾಣದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಒದಗಿಸಿವೆ ಮತ್ತು ಇತರ ರಾಜ್ಯಗಳು ಕೂಡ ಇದೇ ರೀತಿ ಮಾಡಬಲ್ಲವು ಎಂದು ವಾದಿಸಲಾಯಿತು. ಆದಾಗ್ಯೂ, ಈ ವಾದವು ನಿರ್ದಿಷ್ಟವಾಗಿ ಕೆಲವು ರಾಜ್ಯಗಳಲ್ಲಿ ಶಾಲೆಯ ಹೊರಗಿನ ಮಕ್ಕಳ ದೊಡ್ಡ ಬಾಕಿಯನ್ನು ಕಡೆಗಣಿಸಿದೆ ಮತ್ತು ಭಾರತದಲ್ಲಿ ಅಸಂಖ್ಯಾತ ಅನಕ್ಷರಸ್ಥರು ಬಡವರಾಗಿದ್ದು ಭೌಗೋಳಿಕವಾಗಿ ಉತ್ತರ ಮತ್ತು ಪೂರ್ವ ರಾಜ್ಯಗಳಲ್ಲಿ ದೊಡ್ಡ ಜನಸಂಖ್ಯೆಯೊಂದಿಗೆ ಕೇಂದ್ರಿಕೃತವಾಗಿರುವುದನ್ನು ವಾಸ್ತವವಾಗಿ ಗಮನಿಸಲಿಲ್ಲ. ವಾಸ್ತವವಾಗಿ 1993–1994ರಲ್ಲಿ ಉತ್ತರ ಪ್ರದೇಶ (ಅವಿಭಜಿತ), ಬಿಹಾರ (ಅವಿಭಜಿತ), ಮಧ್ಯಪ್ರದೇಶ (ಅವಿಭಜಿತ) ಮತ್ತು ಮಹಾರಾಷ್ಟ್ರಗಳು ಒಟ್ಟಾರೆ ಭಾರತದಲ್ಲಿನ ಬಡವರಲ್ಲಿ ಶೇ.49ರಷ್ಟನ್ನು ಹೊಂದಿದ್ದವು. ಆದರೆ 2004–2005ರಲ್ಲಿ ಅದರ ಪ್ರಮಾಣ ಶೇ.58ರಷ್ಟಾಯಿತು (ಯೋಜನಾ ಆಯೋಗ, 2008). ಈ ರಾಜ್ಯಗಳು ತಮ್ಮದೇ ಆದ ಯೋಜನೆಗಳು ಮತ್ತು ಸಂಪನ್ಮೂಲ ಹಂಚಿಕೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡುವ ಅವಶ್ಯಕತೆಯಿದೆ. ಆದರೆ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರದಿಂದ ಹೆಚ್ಚುವರಿ ಹಣಕಾಸಿನ ಬೆಂಬಲವು ರಾಜ್ಯಗಳಿಗೆ ಬೇಕಾಗುತ್ತದೆ. ಭಾರತದಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಸಾಧನೆಗೆ ಇದು ಅತ್ಯಂತ ಪ್ರಮುಖವಾದುದ್ದಾಗಿದೆ.

ಕೇಂದ್ರ ಸರ್ಕಾರವು ಕಾನೂನು ಮತ್ತು ಸುವ್ಯವಸ್ಥೆ, ಆರೋಗ್ಯ ಮತ್ತು ಶಿಕ್ಷಣದಂತಹ ಪ್ರಮುಖ ವಿಷಯಗಳನ್ನು ನಿರಂತರವಾಗಿ ವಿಸ್ತರಿಸುವ ರಾಜ್ಯ ಪಟ್ಟಿಗೆ ಜವಾಬ್ದಾರಿಯನ್ನು ವಹಿಸಬಾರದು ಎನ್ನುವುದು ಶಿಕ್ಷಣ ಹಕ್ಕು ಕಾಯಿದೆ ವಿರುದ್ಧವಿರುವ ಮತ್ತೊಂದು ವಾದವಾಗಿದೆ. ಒಂದು ವೇಳೆ ಈ ರೀತಿ ಮಾಡಲು ಕೇಂದ್ರವು ಹೋದರೆ, ರಾಜ್ಯ ಸರ್ಕಾರಗಳು ಏರುಪೇರಾಗಿರುವ ತಮ್ಮ ಜನಪ್ರೀಯತೆಗಳಿಗೆ ಆದ್ಯತೆ ನೀಡುವ ಮೂಲಕ ಆದ್ಯತಾ ಕಾರ್ಯಕ್ರಮಗಳನ್ನು ನಿರ್ಲಕ್ಷಿಸುತ್ತವೆ ಎಂಬುದನ್ನು ಸಹ ಇದು ಸೂಚಿಸುತ್ತದೆ. ರಾಜ್ಯ ಸರ್ಕಾರಗಳ ಸಂಪನ್ಮೂಲ ಹಂಚಿಕೆಯಲ್ಲಿನ ಅಸಮರ್ಪಕತೆಯನ್ನು ಸರಿಪಡಿಸುವ ಅಗತ್ಯವಿದ್ದರೂ, ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ನೀಡಲು ಬಡ ರಾಜ್ಯವನ್ನು ಉತ್ತೇಜಿಸುವುದು ಅಷ್ಟೇ ಅಗತ್ಯವಿದೆ ಹಾಗೂ ಅವುಗಳ ಆರ್ಥಿಕ ಮತ್ತು ಸಾಮಾಜಿಕ ನೀತಿಯು ಹಿಂದಿನ ಜನಪ್ರೀಯತೆಗೆ ದಕ್ಕೆ ಬರದಂತೆ ನೋಡಿಕೊಳ್ಳಬೇಕು. ಇಂತಹ ಪ್ರೋತ್ಸಾಹಕರವಾದ ವ್ಯವಸ್ಥೆಯನ್ನು ಕಲ್ಪಿಸುವ ಜವಾಬ್ದಾರಿ ಯೋಜನಾ ಆಯೋಗ ಮತ್ತು 13ನೇ ಹಣಕಾಸು ಆಯೋಗದ್ದಾಗಿರುತ್ತದೆ.

ಇಲ್ಲಿ ಹಲವಾರು ನೈಜ ಸಮಸ್ಯೆಗಳು ಹೊರಹೊಮ್ಮುತ್ತವೆ: ಇದೀಗ ಶಿಕ್ಷಣ ಹಕ್ಕಿನ ಮಸೂದೆಯು ಕಾನೂನಾಗಿ ಮಾರ್ಪಟ್ಟಿದೆ ಮತ್ತು ಎಂಟನೇ ತರಗತಿಯವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಮಕ್ಕಳ ಹಕ್ಕನ್ನು ಖಾತರಿಪಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಗತ್ಯವಾದ ಹಣವನ್ನು ಒಟ್ಟಿಗೆ ಒದಗಿಸಬಹುದೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಶಿರ್ಷಿಕೆ ***"ವೇಗವಾಗಿ ಮತ್ತು ಹೆಚ್ಚು ಅಂತರ್ಗತ ಬೆಳವಣಿಗೆಗೆ ಹಾಗೂ ಪ್ರಾಥಮಿಕ ಹಂತದಲ್ಲಿ ಉತ್ತಮ ಪ್ರವೇಶ ಮತ್ತು ಮಕ್ಕಳನ್ನು ಉಳಿಸಿಕೊಳ್ಳುವುದನ್ನು ಖಾತರಿಪಡಿಸುವುದು ಅಂತರ್ಗತ ಅಭಿವೃದ್ಧಿಯ ಅತ್ಯಗತ್ಯ ಅಂಶವಾಗಿದೆ"*** ಎಂಬುದಾಗಿತ್ತು. ಆದರೆ 2002–2003 ರಿಂದ 2007–2008ರ ಐದು ವರ್ಷಗಳ ಅವಧಿಯಲ್ಲಿ ಆರ್ಥಿಕ ಏಕೀಕರಣದ ನಂತರ, 2008ರ ಮೂರನೇ ತ್ರೈಮಾಸಿಕದಲ್ಲಿ ಪ್ರಾರಂಭವಾದ ಜಾಗತಿಕ ಹಣಕಾಸಿನ ಮತ್ತು ಆರ್ಥಿಕ ಬಿಕ್ಕಟ್ಟುಗಳಿಂದಾಗಿ ಕೇಂದ್ರ ಸರ್ಕಾರದ ಹಣಕಾಸಿನ ಸಮತೋಲನ ತೀರಾ ಹದಗೆಟ್ಟಿತಲ್ಲದೆ, ಎಲ್ಲಾ

ರಾಜ್ಯಸರ್ಕಾರಗಳೂ ಸಹ ಸ್ವಲ್ಪ ಮಟ್ಟಿಗೆ ಇದರ ಫಲವನ್ನು ಪಡೆಯುವಂತಾಯಿತು. ಹೀಗಾಗಿ, 2008–2009ರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಿಡಿಪಿ ಅನುಪಾತಕ್ಕೆ ಒಟ್ಟು ಹಣಕಾಸಿನ ಕೊರತೆ ಶೇ.10ಕ್ಕಿಂತ ಹೆಚ್ಚಾಯಿತು. ಇಂತಹ ಸಂದರ್ಭಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಆರ್ಥಿಕ ನೆರವು, ವಿಶೇಷವಾಗಿ ಸರ್ವ ಶಿಕ್ಷಾ ಅಭಿಯಾನ್ ಯೋಜನೆಯ ಹಣಕಾಸಿನ ಹಂಚಿಕೆಗಳಿಗಿಂತ ಹೆಚ್ಚಿಗೆ ಬೇಕಾಗಿರುವುದರಿಂದ ಶಿಕ್ಷಣ ಹಕ್ಕಿನ ಕಾಯಿದೆಯ ಆದೇಶದಂತೆ ಹಣಕಾಸಿನ ನಿಧಿಯನ್ನು ಹೆಚ್ಚಿಸುವ ಕಾರ್ಯವು ಒಂದು ಸವಾಲಾಗಿ ಉಳಿಯುತ್ತದೆ. ಏಕೆಂದರೆ, ಕೇಂದ್ರ ಸರ್ಕಾರದ ಪ್ರಾಥಮಿಕ ಶಿಕ್ಷಣದ ಕಾರ್ಯಕ್ರಮವನ್ನು ರಾಜ್ಯ ಸರ್ಕಾರಗಳು ಜಾರಿಗೊಳಿಸುತ್ತವೆ.

ಈ ಲೇಖನವು ಮುಂದಿನ ಐದು ವರ್ಷಗಳಲ್ಲಿ ಅಂದರೆ ಹನ್ನೆರಡನೇ ಪಂಚವಾರ್ಷಿಕ ಯೋಜನೆಯ(2012–2017) ಅಂತ್ಯದವರೆಗೆ ಶಿಕ್ಷಣ ಹಕ್ಕಿಗಾಗಿ ಮಾಡುವ ವೆಚ್ಚ ಮತ್ತು ಹಣಕಾಸಿನ ಹಂಚಿಕೆಯ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸುತ್ತದೆ. ಲೇಖನದ 1ನೇ ಭಾಗವು ಸಂಕ್ಷಿಪ್ತ ರೂಪದಲ್ಲಿ ಶಿಕ್ಷಣದ ಹಕ್ಕಿನ ಕೆಲವು ಪ್ರಮುಖ ನಿಬಂಧನೆಗಳ ಮೂಲಕ ಪ್ರಾರಂಭವಾಗುತ್ತದೆ ಮತ್ತು ಶಿಕ್ಷಣದ ಹಕ್ಕಿನ ವೆಚ್ಚ ಮತ್ತು ಹಣಕಾಸನ್ನು ಚರ್ಚಿಸಲು ಸನ್ನಿವೇಶವನ್ನು ನಿಗದಿಪಡಿಸುತ್ತದೆ. ಸಮರ್ಪಕ ಗುಣಮಟ್ಟವನ್ನು ಹೊಂದಿರುವ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕೀಕರಣವನ್ನು ಸಾಧಿಸುವ ವೆಚ್ಚವನ್ನು ವಿಭಾಗ 2 ಪರಿಶೀಲಿಸುತ್ತದೆ. ಅಲ್ಲದೆ, ಈ ವಿಭಾಗವು ಶಿಕ್ಷಣದ ಹಕ್ಕಿನ ಮೇಲಿನ ವೆಚ್ಚದ ಅಂದಾಜುಗಳ ಬಗ್ಗೆ ಕಳವಳ ವ್ಯಕ್ತಪಡಿಸುತ್ತದೆ, ಅದರಲ್ಲೂ ವಿಶೇಷವಾಗಿ ಕಡಿಮೆ ಅಂದಾಜು ಮಾಡಬಹುದಾದ ಸಾಧ್ಯತೆಗಳಿರುವ ಹಿನ್ನಲೆಯನ್ನು ಕೂಡ ಇದು ಚರ್ಚಿಸುತ್ತದೆ. 3ನೇ ವಿಭಾಗವು ಶಿಕ್ಷಣದ ಹಕ್ಕಿನ ಹಣಕಾಸಿನ ನೆರವನ್ನು ಪರಿಕ್ಷೀಸುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ ಎಲ್ಲಾ ಸರ್ಕಾರಿ ಮಟ್ಟಗಳಲ್ಲಿನ ಪ್ರಾಥಮಿಕ ಶಿಕ್ಷಣದ ಒಟ್ಟು ವೆಚ್ಚದಲ್ಲಿ ಶೇ.85ರಷ್ಟನ್ನು ರಾಜ್ಯ ಸರ್ಕಾರಗಳು ಭರಿಸುವಾಗ ಉದ್ಭವಿಸುವ ಸಮಸ್ಯೆಯನ್ನು ವಿಮರ್ಶಿಸುತ್ತದೆ. ಆದರೆ ರಾಜ್ಯ ಸರ್ಕಾರಗಳು ಶಿಕ್ಷಣದ ಹಕ್ಕಿನ ಕಾಯಿದೆಯಲ್ಲಿ ನಿಗದಿಪಡಿಸಿದ ರೂಢಿಗಳ ಗುರಿಗಳನ್ನು ತಲುಪಲು ಕೇಂದ್ರ ಸರ್ಕಾರದ ಸಂಪನ್ಮೂಲಗಳ ಹಂಚಿಕೆಗಳ ಮೇಲೆ ಹೆಚ್ಚಾಗಿ ಅವಲಂಬಿಸಬೇಕಾಗಿರುತ್ತದೆ (ತಮ್ಮದೇ ಆದ ಸಂಪನ್ಮೂಲಗಳ ಹಂಚಿಕೆಗೆ ಹೆಚ್ಚುವರಿಯಾಗಿ). ನಿರ್ದಿಷ್ಟವಾಗಿ, ದೇಶದ ಉತ್ತರ ಮತ್ತು ಪೂರ್ವದಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರುವ ರಾಜ್ಯಗಳನ್ನು ಎದುರಿಸುವ ಸವಾಲು ನಿಜಕ್ಕೂ ಭಯಹುಟ್ಟಿಸುತ್ತದೆ ಹಾಗೂ ರಾಷ್ಟ್ರೀಯ ಮಟ್ಟದ ಪ್ರತಿ ವಿದ್ಯಾರ್ಥಿಯ ಸರಾಸರಿ ಪ್ರಾಥಮಿಕ ಶಿಕ್ಷಣ ವೆಚ್ಚಕ್ಕೆ ಸಮನಾಗಿ ರಾಜ್ಯಗಳು ತಮ್ಮ ಪ್ರತಿ ವಿದ್ಯಾರ್ಥಿಗೆ ಸರಾಸರಿ ಪ್ರಾಥಮಿಕ ಶಿಕ್ಷಣ ವೆಚ್ಚವನ್ನು ಹೆಚ್ಚಿಸಲು ಅನುಕೂಲವಾಗುವಂತೆ ಅವುಗಳನ್ನು ಸಕ್ರಿಯಗೊಳಿಸಲು ಮತ್ತು ಬೆಂಬಲಗೊಳಿಸಲು ಕೇಂದ್ರ ಸರ್ಕಾರದ ವಿಶೇಷ ನೆರವು ಅಗತ್ಯವಾಗುತ್ತದೆ.

1. ಶಿಕ್ಷಣ ಹಕ್ಕು ಕಾಯಿದೆಯ ನಿಬಂಧನೆಗಳು

ನಾವು ಮೊದಲು ಕಾಯಿದೆಯಲ್ಲಿ ಶಾಲೆಗೆ ನೀಡಲಾಗಿರುವ ರೂಢಿಗಳು ಮತ್ತು ಮಾನದಂಡಗಳನ್ನು ಚರ್ಚಿಸುತ್ತೇವೆ, ಅನಂತರ ಮುಖ್ಯ ಕಾಯಿದೆಯಲ್ಲಿರುವ ನಿಬಂಧನೆಗಳನ್ನು ಸಂಕ್ಷಿಪ್ತವಾಗಿ ಚರ್ಚಿಸುತ್ತೇವೆ. ಕಾಯಿದೆಯಲ್ಲಿ ಸೇರಿಸಲಾದ ಅನುಸೂಚಿಯು ಸರ್ಕಾರಿ ಪ್ರಾಥಮಿಕ ಶಾಲೆಗೆ ರೂಢಿಗಳನ್ನು ಮತ್ತು ಮಾನದಂಡಗಳನ್ನು ಇಡುತ್ತದೆ. ಇವು ಪ್ರತಿ ಶಾಲೆಯ ವಿದ್ಯಾರ್ಥಿ–ಶಿಕ್ಷಕ ಅನುಪಾತ ಮತ್ತು ಮೂಲಸೌಕರ್ಯಕ್ಕೆ ಸಂಬಂಧಿಸಿವೆ. ಭಾರತದಲ್ಲಿ ಪ್ರಸ್ತುತ ಪ್ರಾಥಮಿಕ ಶಾಲೆಯ ಹಂತದಲ್ಲಿ ವಿದ್ಯಾರ್ಥಿ–ಶಿಕ್ಷಕ

ಅನುಪಾತವು 40 ಆಗಿದೆ. ಆದರೆ ಶಿಕ್ಷಣ ಹಕ್ಕು ಕಾಯಿದೆಯು ಪ್ರತಿ ಪ್ರಾಥಮಿಕ ಶಾಲೆಗೆ ವಿದ್ಯಾರ್ಥಿ–ಶಿಕ್ಷಕ ಅನುಪಾತವನ್ನು 30ಕ್ಕೆ ನಿಗದಿಗೊಳಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, 30 ರ ವಿದ್ಯಾರ್ಥಿ–ಶಿಕ್ಷಕ ಅನುಪಾತವು ಒಂದು ಬ್ಲಾಕ್ ಅಥವಾ ಜಿಲ್ಲೆಯ ಮಟ್ಟದಲ್ಲಿ ಅನ್ವಯಿಸುವುದಿಲ್ಲ ಆದರೆ ಪ್ರತಿಯೊಂದು ಶಾಲೆಯ ಮಟ್ಟ ಮತ್ತು ಶಾಲೆಗೆ ಅನ್ವಯಿಸುತ್ತದೆ. ಹೀಗಾಗಿ ಶಿಕ್ಷಣ ಹಕ್ಕು ಕಾಯಿದೆಯ ಮಾನದಂಡಗಳು ಮತ್ತು ವಿದ್ಯಾರ್ಥಿ–ಶಿಕ್ಷಕ ಅನುಪಾತ 30ನ್ನು ಅನುಷ್ಠಾನಗೊಳಿಸುವುದರಿಂದ ಏಕ ಅಥವಾ ಎರಡು ಶಿಕ್ಷಕ ಶಾಲೆಯ ವಿದ್ಯಮಾನವು (ಇನ್ನೂ ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುತ್ತದೆ) ಪ್ರಾಯೋಗಿಕವಾಗಿ ಕಣ್ಮರೆಯಾಗುತ್ತದೆ. ಎರಡನೆಯದಾಗಿ, ಹಿರಿಯ ಪ್ರಾಥಮಿಕ ಶಾಲೆಯ ಹಂತದಲ್ಲಿ (6–8ತರಗತಿಗಳು) ವಿಜ್ಞಾನ ಮತ್ತು ಗಣಿತ, ಸಮಾಜ ವಿಜ್ಞಾನ ಮತ್ತು ಭಾಷೆಗಳಿಗೆ ಪ್ರತಿ ವರ್ಗಕ್ಕೆ ಕನಿಷ್ಠ ಒಂದು ಶಿಕ್ಷಕನೊಂದಿಗೆ ವಿದ್ಯಾರ್ಥಿ–ಶಿಕ್ಷಕ ಅನುಪಾತವು 35 ಆಗಿರಬೇಕು. ಮೂರನೆಯದಾಗಿ ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ, ಪ್ರತಿ ಶಿಕ್ಷಕರಿಗೆ ಕನಿಷ್ಟ ಒಂದು ತರಗತಿ ಇರಬೇಕು. ಇದು ಪ್ರಸ್ತುತ ಎರಡು ಅಥವಾ ಮೂರು ಕೋಣೆಗಳ ಶಾಲೆಗಳ ವಿದ್ಯಮಾನವು ಶಿಕ್ಷಕರ ವಯಸ್ಸಿನ ಕಾರಣಕ್ಕಾಗಿ ಕಣ್ಮರೆಯಾಗಬೇಕೆಂಬುದನ್ನು ಸೂಚಿಸುತ್ತದೆ. ಶಾಲಾ ಕಟ್ಟಡದಲ್ಲಿ ಬಾಲಕರಿಗೆ ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು ಎಂದು ಶಿಕ್ಷಣ ಹಕ್ಕು ಕಾಯಿದೆಯು ಹೇಳುತ್ತದೆ. ಉದಾಹರಣೆಗೆ, 2005–2006ರಲ್ಲಿ, ಶೇ.45ರಷ್ಟು ಪ್ರಾಥಮಿಕ ಶಾಲೆಗಳು ಮತ್ತು ಶೇ.15ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಶೌಚಾಲಯವನ್ನು ಹೊಂದಿರಲಿಲ್ಲ. ಈ ಕಾರಣಕ್ಕಾಗಿ ಕಾಯಿದೆಯು ಶಾಲಾ ಕಟ್ಟಡದಲ್ಲಿ ಪ್ರತ್ಯೇಕ ಶೌಚಾಲಯಗಳಿರಬೇಕು ಎಂದು ಹೇಳಿದೆ. ಜೊತೆಗೆ, ಶಾಲೆಯು ಸುರಕ್ಷಿತ ಕುಡಿಯುವ ನೀರಿನ ಸೌಲಭ್ಯಗಳನ್ನು ಸಹ ಹೊಂದಿರಬೇಕೆಂದು ಶಿಕ್ಷಣ ಹಕ್ಕು ಕಾಯಿದೆಯು ತಿಳಿಸುತ್ತದೆ. ಏಕೆಂದರೆ, ಅಲ್ಲಿ ಶೇ.15ರಷ್ಟು ಪ್ರಾಥಮಿಕ ಶಾಲೆಗಳು ಮತ್ತು ಶೇ.5ರಷ್ಟು ಹಿರಿಯ ಪ್ರಾಥಮಿಕ ಶಾಲೆಗಳು ಕುಡಿಯುವ ನೀರನ್ನು ಹೊಂದಿರಲಿಲ್ಲ. ಕುಡಿಯುವ ನೀರು ಇಲ್ಲದ ಶಾಲೆಗಳಲ್ಲಿನ(ಹಳ್ಳಿಗಳಲ್ಲಿ) ಮಕ್ಕಳು ಸಹಜವಾಗಿ ನೀರು ಕುಡಿಯಲು ಮನೆಗೆ ಹೋಗಿ ನಂತರ ಆ ದಿನಕ್ಕೆ ಶಾಲೆಗೆ ಹಿಂತಿರುಗುತ್ತಿರಲಿಲ್ಲ (ಮೆಹ್ರೋತ್ರ 2005). ಆದ್ದರಿಂದ ಶಾಲೆಗಳಿಗೆ ಪರಿಶುದ್ಧವಾದ ಕುಡಿಯುವ ನೀರಿನ ಸೌಲಭ್ಯಗಳನ್ನು ಕಲ್ಪಿಸುವುದು ಅತ್ಯವಶ್ಯಕವಾಗಿದೆ. ಕಾಯಿದೆಯ ಈ ನಿಬಂಧನೆಗಳನ್ನು ಪೂರೈಸಿದಾಗ ಮಾತ್ರ ನಾವು ಪ್ರಸ್ತುತ ವ್ಯವಸ್ಥೆಯಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ಕಾಣಬಹುದು. ಶಿಕ್ಷಣ ಹಕ್ಕು ಕಾಯಿದೆಯು ಮಧ್ಯಾಹ್ನದ ಊಟವನ್ನು ನೀಡುವ ಶಾಲೆಯು ಅಡಿಗೆ ಮನೆಯನ್ನು ಹೊಂದಿರುವುದರ ಜೊತೆಗೆ ಒಂದು ಆಟದ ಮೈದಾನವನ್ನು ಮತ್ತು ಕಟ್ಟಡದ ಸುತ್ತ ಕಾಂಪೌಂಡ್‌ನ್ನು ಹೊಂದಿರಬೇಕು ಎಂದು ನಿಬಂಧನೆ ಹಾಕುತ್ತದೆ. ಈ ಎಲ್ಲಾ ನಿಬಂಧನೆಗಳು ವೆಚ್ಚದ ಪರಿಣಾಮಗಳನ್ನು ಸ್ಪಷ್ಟಪಡಿಸುತ್ತವೆ. ಮುಂದಿನ ವಿಭಾಗದಲ್ಲಿ ಇದನ್ನು ಚರ್ಚಿಸಲಾಗಿದೆ.

ಕನಿಷ್ಠ ಸಂಖ್ಯೆಯ ಕೆಲಸದ ದಿನಗಳು ಪ್ರಾಥಮಿಕ ಶಾಲೆಗಳಿಗೆ 200 ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ 220 ಆಗಿರಬೇಕೆಂದು ಶಿಕ್ಷಣ ಹಕ್ಕು ಕಾಯಿದೆ ಹೇಳುತ್ತದೆ. ಪ್ರಸಕ್ತ ಚಾಲ್ತಿಯಲ್ಲಿರುವ ಸನ್ನಿವೇಶದಿಂದ ಸ್ವಾಗತಾರ್ಹ ಬದಲಾವಣೆಯೆಂದರೆ, ಬಹುತೇಕ ರಾಜ್ಯಗಳಲ್ಲಿ ಶಾಲೆಯ ಕೆಲಸದ ದಿನಗಳು ವಿರಳವಾಗಿ 180 ಕ್ಕಿಂತ ಹೆಚ್ಚಿವೆ (ಮೆಹ್ರೋತ್ರ 2005).

ಮೇಲಿನ ರೂಢಿಗಳು ಮತ್ತು ಮಾನದಂಡಗಳ ಜೊತೆಯಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಮುಖ್ಯ ಕರಡಿನಲ್ಲಿರುವ ಕೆಲವು ಪ್ರಮುಖ ನಿಬಂಧನೆಗಳನ್ನು ನಾವು ಗಮನಿಸಬೇಕಾಗುತ್ತದೆ. ಮೊದಲನೇಯದಾಗಿ ಶಿಕ್ಷಣ ಹಕ್ಕು ಕಾಯಿದೆಯು 3–6 ವರ್ಷ ವಯಸ್ಸಿನ ಮಕ್ಕಳಿಗೆ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಪ್ರವೇಶವನ್ನು ಒದಗಿಸಬೇಕು ಎಂದು ಸೂಚಿಸುತ್ತದೆ ಮತ್ತು ಅದು "ಸರ್ಕಾರವು ಸೂಕ್ತ ರೀತಿಯಲ್ಲಿ ಮುಕ್ತ ಶಾಲಾ ಶಿಕ್ಷಣವನ್ನು ಒದಗಿಸುವ ಅಗತ್ಯವಾದ ವ್ಯವಸ್ಥೆಗಳನ್ನು ಮಾಡಬೇಕು" ಎಂದು

ಹೇಳುತ್ತದೆ. ಬಹುಶ: ಇದು ಶಿಕ್ಷಣ ಹಕ್ಕು ಕಾಯಿದೆಯ ದುರ್ಬಲವಾದ ಷರತ್ತುಗಳಲ್ಲಿ ಒಂದಾಗಿದೆ, ಏಕೆಂದರೆ ಇದು ಶಾಲಾಪೂರ್ವ ಶಿಕ್ಷಣದ ಮಹತ್ವವನ್ನು ಕಡಿಮೆ ಅಂದಾಜಿಸುತ್ತದೆ ಹಾಗೂ ಮೂರು ಮತ್ತು ಆರು ವರ್ಷಗಳ ನಡುವಿನ ಎಲ್ಲಾ ಮಕ್ಕಳಿಗೆ ಪೂರ್ವ ಶಾಲಾ ಶಿಕ್ಷಣವನ್ನು ಖಾತರಿಪಡಿಸುವ ವೆಚ್ಚವನ್ನು ಸಹ ಅಂದಾಜು ಮಾಡುವುದಿಲ್ಲ.

ಎರಡನೇಯದಾಗಿ, ಖಾಸಗಿ ಅನುದಾನರಹಿತ ಶಾಲೆಗಳು ವರ್ಗ–1 ರಲ್ಲಿ ಪ್ರವೇಶಿಸಲು, ಆ ವರ್ಗದ ಸಾಮರ್ಥ್ಯ ಕನಿಷ್ಠ ಪಕ್ಷ ಶೇ.25 ರಷ್ಟು, ದುರ್ಬಲ ವರ್ಗಗಳ ಮಕ್ಕಳು ಮತ್ತು ನೆರೆಹೊರೆಯಲ್ಲಿರುವ ಅನಾನುಕೂಲಕರ ಗುಂಪುಗಳ ಮಕ್ಕಳ ಶಿಕ್ಷಣ ಪೂರ್ಣಗೊಳ್ಳುವ ತನಕ ಅವರಿಗೆ ಉಚಿತ ಪ್ರಾಥಮಿಕ ಶಿಕ್ಷಣವನ್ನು ನೀಡುವ ಅಗತ್ಯವನ್ನು ಶಿಕ್ಷಣ ಹಕ್ಕು ಕಾಯಿದೆ ಹೇಳುತ್ತದೆ. ಇದರಿಂದ ಆ ಶಾಲೆಯು ಪ್ರತಿ ಮಗುವಿನ ವೆಚ್ಚದ ಆಧಾರದ ಮೇಲೆ ಸರ್ಕಾರದಿಂದ ಹಣವನ್ನು ಮರುಪಾವತಿ ಪಡೆಯಲು ಸಾಧ್ಯವಾಗುತ್ತದೆ. ಇದು ಶಿಕ್ಷಣ ಹಕ್ಕು ಕಾಯಿದೆಯ ಹೆಚ್ಚು ಟೀಕೆಗೊಳಗಾದ ಷರತ್ತುಗಳಲ್ಲಿ ಒಂದಾಗಿದೆ. ಏಕೆಂದರೆ ಇದು ಖಾಸಗಿ ಶಾಲಾ ಶಿಕ್ಷಣವನ್ನು ಪ್ರೋತ್ಸಾಹಿಸಲು ಉತ್ಕೃಷ್ಟ ಗುಣಮಟ್ಟದ ಖಾಸಗಿ ಶಾಲೆಗಳು ಮತ್ತು ಕನಿಷ್ಠ ಗುಣಮಟ್ಟದ ಸರ್ಕಾರಿ ಶಾಲೆಗಳು ಎಂಬ ವಿಭಜನೆಯು ಶಾಲಾ ವ್ಯವಸ್ಥೆಯಲ್ಲಿ ಬೇರೂರುವಂತೆ ಮಾಡಿದೆ. ಇದು ವಿಭಜಿತವಾದ ಒಂದು ಭಾಗಕ್ಕೆ ವಿರುದ್ಧವಾಗಿ 'ಸಾಮಾನ್ಯ ಶಾಲೆಯ ವ್ಯವಸ್ಥೆ' ಎಂಬ ಕಲ್ಪನೆಯ ಅಂತ್ಯವನ್ನು ಸೂಚಿಸುವಂತೆ ಕಾಣುತ್ತದೆ, ಇದು, ಕೊಥಾರಿ ಆಯೋಗದಂದಿನಿಂದಲೂ (1964) (ದುಬೆ ಮತ್ತು ಝು) ಪ್ರತಿಪಾದಿಸಲ್ಪಟ್ಟಿದೆ.

ಮೂರನೆಯದಾಗಿ, ಸರ್ಕಾರದಿಂದ ಮಾನ್ಯತೆ ಪ್ರಮಾಣಪತ್ರವನ್ನು ಪಡೆಯದೆ ಯಾವುದೇ ಶಾಲೆಯನ್ನು ಸ್ಥಾಪಿಸಬಾರದು ಎಂದು ಶಿಕ್ಷಣ ಹಕ್ಕು ಕಾಯಿದೆಯು ಖಚಿತಪಡಿಸುತ್ತದೆ. ದೇಶದ ಖಾಸಗಿ ವಲಯದಲ್ಲಿ ವ್ಯಾಪಕವಾಗಿ ಗುರುತಿಸಲ್ಪಡದ ಅಸಂಖ್ಯಾತ ಅನುದಾನರಹಿತ ಶಾಲೆಗಳ ಇಂದಿನ ಪರಿಸ್ಥಿತಿಯಲ್ಲಿ ಇದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.

ನಾಲ್ಕನೆಯದಾಗಿ, ಪ್ರತಿ ಶಾಲೆಯು ಸ್ಥಳೀಯ ಚುನಾಯಿತ ಪ್ರತಿನಿಧಿಗಳು, ಆ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಪೋಷಕರು ಮತ್ತು ಶಿಕ್ಷಕರನ್ನು ಒಳಗೊಂಡ ಶಾಲಾ ನಿರ್ವಹಣಾ ಸಮಿತಿಯನ್ನು ರಚಿಸಿಕೊಳ್ಳಬೇಕು ಎಂದು ಶಿಕ್ಷಣ ಹಕ್ಕು ಕಾಯಿದೆಯು ಪ್ರತಿಪಾದಿಸುತ್ತದೆ. ಏಕೆಂದರೆ, ಈ ಶಾಲಾ ನಿರ್ವಹಣಾ ಸಮಿತಿಯು ಆಶಾದಾಯಕವಾಗಿ ಶಿಕ್ಷಕರ ಅನುಪಸ್ಥಿತಿಯನ್ನು ನಿಯಂತ್ರಿಸಬಲ್ಲದು ಎಂಬ ನಂಬಿಕೆಯಿದೆ. ಆದರೆ ಭಾರತೀಯ ಸರ್ಕಾರಿ ಶಾಲೆಗಳಲ್ಲಿನ ಶಾಲಾ ನಿರ್ವಹಣಾ ಸಮಿತಿಯು ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇರುವ ಸಂಗತಿ ಕಾಲಕಾಲಕ್ಕೆ ಕಂಡು ಬರುವ ಸುಪರಿಚಿತ ಸಮಸ್ಯೆಯಾಗಿದೆ.

ಐದನೆಯದಾಗಿ, ಶಿಕ್ಷಕರ ಸೇವೆಯನ್ನು ಸರ್ಕಾರವು ಹೆಚ್ಚಾಗಿ ಶೈಕ್ಷಣಿಕವಲ್ಲದ ಉದ್ದೇಶಗಳಿಗೆ ಬಳಸಿಕೊಳ್ಳುತ್ತದೆ ಎಂಬ ಪೋಷಕರು ಮತ್ತು ಶಿಕ್ಷಕರ ದೀರ್ಘಕಾಲದ ದೂರಿನ ಬಗ್ಗೆ ಶಿಕ್ಷಣ ಹಕ್ಕು ಕಾಯಿದೆಯು ಪ್ರಸ್ತಾಪಿಸುತ್ತದೆ. ಅವರ ಸೇವೆಗಳನ್ನು ಜನಗಣತಿ, ವಿಪತ್ತು ಪರಿಹಾರ ಕರ್ತವ್ಯಗಳು ಅಥವಾ ಸ್ಥಳೀಯ ಪ್ರಾಧಿಕಾರಗಳು, ರಾಜ್ಯ ಶಾಸನಸಭೆಗಳು ಅಥವಾ ಸಂಸತ್ತಿನ ಚುನಾವಣೆಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಹೊರತು ಪಡಿಸಿ ಇನ್ನಾವುದೇ ಉದ್ದೇಶಗಳಿಗೆ ಬಳಸುವಂತಿಲ್ಲವೆಂದು ಕಾಯಿದೆಯು ಸ್ಪಷ್ಟಪಡಿಸುತ್ತದೆ.

1.1. ಕಾಯಿದೆಯಲ್ಲಿನ ಆಸಕ್ತಿದಾಯಕ ಅಂಶಗಳು

ಶಿಕ್ಷಣದ ಹಕ್ಕುಗಳ ಕಾಯಿದೆಯ ನಿಬಂಧನೆಗಳೊಂದಿಗೆ ಎರಡು ವಿಶಾಲ ರೀತಿಯ ಆಸಕ್ತಿದಾಯಕ ಅಂಶಗಳಿವೆ. ಮೊದಲಿಗೆ, ಅಗತ್ಯವಾಗಿ ಯಾವುದೇ ಹಣಕಾಸಿನ ಪರಿಣಾಮವನ್ನು ಹೊಂದಿರದ ಆಸಕ್ತಿದಾಯಕ ಅಂಶಗಳು ಇವೆ. ಎರಡನೆಯದಾಗಿ, ಅವುಗಳೊಂದಿಗೆ ಹಣಕಾಸಿನ ವೆಚ್ಚವನ್ನು ಹೊಂದಿರುವ ಆಸಕ್ತಿದಾಯಕ ಅಂಶಗಳು. ನಾವು ಪ್ರತಿಯೊಂದನ್ನು ಇಲ್ಲಿ ಚರ್ಚಿಸುತ್ತೇವೆ.

ಅತ್ಯಂತ ಹೆಚ್ಚಿನ ಪ್ರಮಾಣದ ಶಿಕ್ಷಕ ಗೈರುಹಾಜರಿಯು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಮಕ್ಕಳ ಕಳಪೆ ಕಲಿಕೆಗೆ ದೊಡ್ಡ ಕಾರಣವಾಗಿದೆ (ಕ್ರೆಮರ್ ಮತ್ತು ಇತರರು, 2004). ಭಾರತದ 20 ಪ್ರಮುಖ ರಾಜ್ಯಗಳಲ್ಲಿ ಪ್ರತಿನಿಧಿ ಮಾದರಿಯನ್ನು ಆಧರಿಸಿ ನಡೆಸಿದ ವಿಶ್ವಬ್ಯಾಂಕಿನ ಒಂದು ಮೂಲ ಅಧ್ಯಯನವು ಶಾಲಾ ಕ್ಯಾಲೆಂಡರ್ ವರ್ಷದ ಸರಾಸರಿ ಕೆಲಸದ ದಿನಗಳಲ್ಲಿ ಶೇ.24ರಷ್ಟು ಶಿಕ್ಷಕರ ಗೈರುಹಾಜರಿ ಇದೆ ಎಂದು ತಿರ್ಮಾನಿಸಿದೆ. ಹೆಚ್ಚು ಶೈಕ್ಷಣಿಕವಾಗಿ ಹಿಂದುಳಿದ ಬಹುತೇಕ ರಾಜ್ಯಗಳು ಅಧಿಕ ಮಟ್ಟದ ಶಿಕ್ಷಕ ಗೈರುಹಾಜರಿಯ ಲಕ್ಷಣವನ್ನು ಹೊಂದಿದ್ದು, ಜಾರ್ಕಾಂಡ್ ಶೇ.38ರಷ್ಟು ಶಿಕ್ಷಕ ಗೈರುಹಾಜರಿ ದರವನ್ನು ಹೊಂದಿದೆ, ಆದರೆ ದಕ್ಷಿಣದ ರಾಜ್ಯಗಳು ಸಾಮಾನ್ಯವಾಗಿ ಶೇ.20ಕ್ಕಿಂತ ಕಡಿಮೆ ಪ್ರಮಾಣದ ಶಿಕ್ಷಕ ಗೈರುಹಾಜರಿ ದರವನ್ನು ಹೊಂದಿವೆ. ಈ ಅಧ್ಯಯನದ ಪ್ರಮುಖ ಆತಂಕವೇನೆಂದರೆ, ಒಂದು ವೇಳೆ ಶಾಲೆಗಳಲ್ಲಿ ಶಿಕ್ಷಕರು ಉಪಸ್ಥಿತರಿದ್ದರೂ ಕೂಡ ಹೆಚ್ಚಿನ ಬೋಧನಾ ಚಟುವಟಿಕೆಗಳು ತರಗತಿ ಸಮಯದಲ್ಲಿ ನಡೆಯದೆ ಇರುವುದು. ಆದ್ದರಿಂದ ಇಲ್ಲಿ ಕಂಡು ಬರುವ ನಿಜವಾದ ಸಂಗತಿ ಯಾವುದೆಂದರೆ, ಶಾಲೆಯ ಸುಧಾರಣೆಗಾಗಿ ಒಂದು ವೇಳೆ ಶಿಕ್ಷಣ ಹಕ್ಕು ಕಾಯಿದೆಯಿಂದ ಶಾಲಾ ನಿರ್ವಹಣಾ ಸಮಿತಿಯು ಸ್ಥಾಪನೆಯಾದರೆ ಅದು ಸುಧಾರಣೆಗಾಗಿ ಸರ್ಕಾರದ ವ್ಯವಹಾರದಲ್ಲಿ ಅಗತ್ಯವಾದ ಪ್ರಭಾವವನ್ನು ಬೀರುತ್ತದೆ. ಶಾಲಾ ನಿರ್ವಹಣಾ ಸಮಿತಿಯು ಪ್ರತಿಯೊಂದು ಹಳ್ಳಿಯಲ್ಲಿ (ಗ್ರಾಮ ಪಂಚಾಯತ್) ಈಗಾಗಲೇ ಅಸ್ತಿತ್ವದಲ್ಲಿರುವ ಗ್ರಾಮ ಶಿಕ್ಷಣ ಸಮಿತಿಗಿಂತ ಭಿನ್ನವಾಗಿ ಏನೂ ಕಾಣುತ್ತಿಲ್ಲ. ಏಕೆಂದರೆ ಇವು ಕೂಡ ಸ್ಥಳೀಯ ಗಣ್ಯರು ಮತ್ತು ಶಿಕ್ಷಕರಿಂದ ಕೂಡಿದ್ದು ಕಾರ್ಯ ನಿರ್ವಹಿಸುತ್ತವೆ. ಶಿಕ್ಷಣದ ಹಕ್ಕನ್ನು ಅಂಗೀಕರಿಸಿದ ನಂತರ ಕನಿಷ್ಠ ನಿಯಮಗಳನ್ನು ರೂಪಿಸಬೇಕಾದರೆ (ಕೇಂದ್ರ ಶಿಕ್ಷಣ ಇಲಾಖೆಯಿಂದ) ಇದು ತುಂಬ ಉತ್ತಮವೆನಿಸುತ್ತದೆ.

ಸಂಸತ್ತಿನಲ್ಲಿ ಕಾಯಿದೆಯು ಭವಿಷ್ಯದಲ್ಲಿ ಶಾಲಾ ನಿರ್ವಹಣಾ ಸಮಿತಿಗೆ ಈ ಅಧಿಕಾರವನ್ನು ನೀಡಲಾಗುವುದು ಎಂದು ಖಚಿತಪಡಿಸುತ್ತದೆ. ಆ ಅಧಿಕಾರವು ಯಾವುದೆಂದರೆ, (ಎ) ಶಿಕ್ಷಕರು ಗೈರುಹಾಜರಾಗಲು ಬಯಸಿದಾಗ ಅವರ ರಜೆಗೆ ಅನುಮತಿ ನೀಡುವುದು (ಬಿ) ಶಿಕ್ಷಕರ ಸಂಬಳ ಬಿಡುಗಡೆಗೆ ಅನುಮತಿ ನೀಡುವುದು, ಸಂಬಳ ಬಿಡುಗಡೆಯ ಅನುಮತಿಯು ಶಿಕ್ಷಕರ ಹಾಜರಾತಿ ಮತ್ತು ಕಾರ್ಯಕ್ಷಮತೆಗೆ ಒಳಪಟ್ಟಿರುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಶಿಕ್ಷಕನು ಜಿಲ್ಲೆಯ ಆಡಳಿತದ ಉದ್ಯೋಗಿಯಾಗಿ ಉಳಿಯಬೇಕು ಮತ್ತು ಆಡಳಿತದಿಂದ ತನ್ನ ವೇತನವನ್ನು ಪಡೆಯಬೇಕು ಎಂಬ ನಿಯಮಗಳನ್ನು ಹಾಕಲಾಗುತ್ತದೆ. ಆದರೆ ಶಾಲಾ ನಿರ್ವಹಣಾ ಸಮಿತಿ ಅನುಮೋದಿಸುವ ತನಕ ರಜೆ ಅಥವಾ ವೇತನವನ್ನು ನೀಡಲಾಗುವುದಿಲ್ಲ. ಈ ರೀತಿಯ ಮಾನದಂಡವು ರಾಜ್ಯದಲ್ಲಿ ಶಿಕ್ಷಕರ ಸಂಘಗಳ ಶಕ್ತಿಯನ್ನು ಸ್ಥಗಿತಗೊಳಿಸುವ ಸಾಮರ್ಥ್ಯವನ್ನು ಹೊಂದಿದೆ (ಅದರಲ್ಲಿ ಕಿಂಗ್ಡಾನ್ ಮತ್ತು ಮುಝುಮಿಲ್, 2003 ನೋಡಿ). ವಾಸ್ತವವಾಗಿ ಶಿಕ್ಷಣ ಹಕ್ಕಿನ ಮಸೂದೆಯ ಮೂಲ ಕರಡಿನಲ್ಲಿ ಶಾಲಾ ನಿರ್ವಹಣಾ ಸಮಿತಿಗೆ ಶಿಕ್ಷಕರನ್ನು ನೇಮಿಸುವ ಅಧಿಕಾರವನ್ನು ನೀಡಲಾಗಿತ್ತು ಹಾಗೂ ಜಿಲ್ಲೆಯ ಮೂಲದ ಕೇಡರ್ ಬದಲಿಗೆ ಶಿಕ್ಷಕರಿಗೆ ಶಾಲಾ ಆಧಾರಿತ ಕೇಡರ್‌ನ್ನು ನೀಡಲಾಗಿತ್ತು. ಇವು ಶಿಕ್ಷಕರ ಹೊಣೆಗಾರಿಕೆ/ಉತ್ತೇಜನಾ ರಚನೆಯನ್ನು ಸುಧಾರಿಸುವ

ಏಕೈಕ ಎರಡು ಸುಧಾರಣೆಗಳಾಗಿದ್ದವು, ಇವು ಕಾಯಿದೆಯಲ್ಲಿನ ಬಹುತೇಕ ಕೂಡುವಳಿ ಆಧಾರಿತ ಸುಧಾರಣೆಗಳ ವಿರುದ್ಧವಾಗಿ ಕಾರ್ಯನಿರ್ವಹಿಸಲ್ಪಟ್ಟಿದ್ದವು. ಆದಾಗ್ಯೂ, ಶಿಕ್ಷಣ ಹಕ್ಕು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸುವಾಗ ಈ ಸುಧಾರಣೆಗಳನ್ನು ಶಿಕ್ಷಣ ಹಕ್ಕುಗಳ ಕಾಯಿದೆಯ ಅಂತಿಮ ಆವೃತ್ತಿಯಿಂದ ಕೈಬಿಡಲಾಯಿತು.

ಜನಗಣತಿ, ಪಿಆರ್‌ಐ, ರಾಜ್ಯ ಮತ್ತು ಸಂಸತ್ ಚುನಾವಣೆಗಳು, ಮತ್ತು ವಿಪತ್ತು ಪರಿಹಾರ ಕರ್ತವ್ಯಗಳು ಮುಂತಾದ ಶಿಕ್ಷಣಯೇತರ ಉದ್ದೇಶಗಳಿಗಾಗಿ ಅವರ ಸೇವೆಯ ಅಗತ್ಯತೆಯನ್ನು ತಿಳಿಸುವುದರ ಮೂಲಕ ಶಿಕ್ಷಕರ ಹಾಜರಾತಿಯನ್ನು ಸುಧಾರಿಸುವ ಸಾಧ್ಯತೆಗಳನ್ನು ಸಹ ಕಾಯಿದೆಯು ಒಪ್ಪಿಕೊಳ್ಳುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಕಾಯಿದೆಯಲ್ಲಿ ಶಿಕ್ಷಕರ ಭೋಧನೆಗೆ ಸಂಬಂಧಿಸಿದಂತೆ ಏನನ್ನು ಪ್ರಸ್ತಾಪಿಸಲಾಗಿದೆಯೋ ಅದು ಶಿಕ್ಷಕರ ಸಮಯವನ್ನು ಭೋಧನೇತರ ಕರ್ತವ್ಯಗಳಿಗೆ ತಿರುಗಿಸುವ ಬಗ್ಗೆ ಪ್ರಸ್ತುತ ಪರಿಸ್ಥಿತಿಗಿಂತ ಭಿನ್ನವಾಗಿದೆ. ಸಹಜವಾಗಿ ಶಿಕ್ಷಕರ ಗೈರುಹಾಜರಿಯನ್ನು ವಿವರವಾಗಿ ಪರೀಕ್ಷಿಸುವ ಅಧ್ಯಯನಗಳು, ಶಿಕ್ಷಕರ ಗೈರುಹಾಜರಿಗೆ ವ್ಯಯಕ್ತಿಕ ರಜೆ ದಿನಗಳು ಮತ್ತು ಶಾಲೆಯಲ್ಲಿ ಶಿಕ್ಷಕರ ಗೈರುಹಾಜರಾತಿಯ ಒಟ್ಟು ದಿನಗಳಲ್ಲಿ ಒಂದು ಸಣ್ಣ ಭಾಗವನ್ನು ಮಾತ್ರವೇ ಪರಿಗಣಿಸಲ್ಪಟ್ಟ ಶಿಕ್ಷಣಯೇತರ ಕರ್ತವ್ಯಗಳು ಅತ್ಯಂತ ಪ್ರಮುಖ ಕಾರಣಗಳಾಗಿವೆ ಎಂಬುದನ್ನು ಗುರುತಿಸುತ್ತವೆ (ಉದಾಹರಣೆಗೆ ನೋಡಿ ಶಂಕರ್, 2007). ಇದು ಸಹ ಶಾಲೆಗಳು ತಮ್ಮ ಸ್ವಯಂ–ವರದಿಯಲ್ಲಿ ಕೇವಲ 8–10 ದಿನಗಳು (ಕಡ್ಡಾಯಗೊಳಿಸಿರುವ 220 ದಿನಗಳು) ಶಿಕ್ಷಣಯೇತರ ಕರ್ತವ್ಯಗಳಿಗೆ ವ್ಯಯಿಸಲ್ಪಡುತ್ತವೆ ಎಂದು ತೋರಿಸುವ ಶಿಕ್ಷಣದ ಜಿಲ್ಲಾ ಮಾಹಿತಿ ವ್ಯವಸ್ಥೆಯ ದತ್ತಾಂಶಗಳಿಂದ ದೃಢೀಕರಿಸಲ್ಪಟ್ಟಿದೆ (ಕಿಂಗ್ಡನ್,2010). ಅದೇನೇ ಇದ್ದರೂ, ಸರ್ಕಾರವು ಸ್ವತ: ಶಿಕ್ಷಕರಿಗೆ ಇತರ ಕರ್ತವ್ಯಗಳಿಂದ ಯಾವುದೇ ವಿರಾಮವನ್ನು ನೀಡದೆ ಇರುವುದರಿಂದ, ಶಾಲೆಯಲ್ಲಿ ಶಿಕ್ಷಕರ ಹಾಜರಾತಿಯು ನಿರಂತರವಾಗಿ ತುಂಬ ಕೆಟ್ಟದಾಗಿರುತ್ತದೆ.

ಅಂತಿಮವಾಗಿ, ಕಾಯಿದೆಯು ಪೂರ್ವ ಶಾಲಾ ಶಿಕ್ಷಣಕ್ಕೆ ಕಡೆಮೆ ಗಮನವನ್ನು ಕೊಡುತ್ತದೆ. ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಪರಿಣಾಮಕಾರಿತ್ವದ ಬಗ್ಗೆ ಅಗಾಧವಾದ ಸಂಶೋಧನಾ ಪುರಾವೆಗಳಿವೆ, ಶಾಲಾ ಪೂರ್ವ ಶಿಕ್ಷಣಕ್ಕೆ ಒಳಪಡುವ ಪೂರ್ವ ಶಾಲಾ ವಯಸ್ಸಿನ ಮಕ್ಕಳು ಶಾಲೆಯಲ್ಲಿ ಮಾತ್ರವಲ್ಲದೆ ತಮ್ಮ ಜೀವನದಲ್ಲಿಯೂ ಉತ್ತಮವಾಗಿ ಕಾರ್ಯ ನಿರ್ವಹಿಸಬಲ್ಲರು ಎಂಬುದನ್ನು ಇದು ಖಚಿತಪಡಿಸಿದೆ. ಈ ಪುರಾವೆಯು ಸಮಂಜಸವಾಗಿ ಉತ್ತಮ ಶಿಕ್ಷಣವನ್ನು ಹೊಂದಿದ ಪೋಷಕರ ಮಕ್ಕಳಲ್ಲಿಯೂ ಕೂಡ ಇದೆ. ಭಾರತದ ಒಟ್ಟಾರೆ ವಯಸ್ಕ ಜನಸಂಖ್ಯೆಯಲ್ಲಿ ಮೂರನೇ ಒಂದು ಭಾಗವನ್ನು ಹೊಂದಿರುವ ಕಾರ್ಯನಿರತ ಅನಕ್ಷರಸ್ಥ ಪೋಷಕರ ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣವು ಇನ್ನಷ್ಟು ಮುಖ್ಯವಾಗುತ್ತದೆ. ಏಕೆಂದರೆ, ಸಾಮಾನ್ಯವಾಗಿ ಅನಕ್ಷರಸ್ಥ ಪೋಷಕರ ಮಕ್ಕಳು ಪ್ರಾಥಮಿಕ ಶಾಲೆಯ ಒಂದನೇ ತರಗತಿಗೆ ಪ್ರವೇಶಿಸಲು ಕೆಟ್ಟ ತಯಾರಿ ಮಾಡಿಕೊಂಡಿರುತ್ತಾರೆ ಮತ್ತು ಇಂತಹ ಬಡ ಮಕ್ಕಳು ಸಾಮಾನ್ಯವಾಗಿ 1 ಮತ್ತು 2ನೇ ತರಗತಿಯಿಂದ ಆದಷ್ಟು ಹೊರಬರಲು ಒಲವು ತೋರುತ್ತಾರೆ. ಅಂದರೆ ಶಾಲೆಯನ್ನು ಅರ್ಧಕ್ಕೆ ಬಿಟ್ಟುಬಿಡುತ್ತಾರೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕೀಕರಣವನ್ನು ಸಾಧಿಸುವ ಒಟ್ಟು ವೆಚ್ಚದಲ್ಲಿ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಣಕ್ಕೆ ಹೆಚ್ಚು ಖರ್ಚು ಮಾಡದೆ ಇರುವುದು ಕಂಡುಬಂದಿದೆ. ಶಿಕ್ಷಣ ಹಕ್ಕು ಕಾಯಿದೆಯು 6–14 ವರ್ಷ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಸೂಚಿಸುತ್ತದೆಯಾದರೂ, ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳನ್ನು ಉಳಿಸಿಕೊಳ್ಳುವುದು ಪೂರ್ವ ಶಾಲಾ ಶಿಕ್ಷಣಕ್ಕೆ ಒಳಗಾಗುವ ಮೂಲಕ ಮಕ್ಕಳು ಪ್ರಾಥಮಿಕ ಶಾಲೆಯ ಯಶಸ್ವಿ ಪ್ರವೇಶಕ್ಕೆ ಮಾಡಬಹುದಾದ ಸಿದ್ಧತೆಯನ್ನು ಅವಲಂಬಿಸಿರುತ್ತದೆ ಎಂಬುದು ವಾಸ್ತವಿಕವಾಗಿದೆ. ಭಾರತದಲ್ಲಿ ಪೂರ್ವ–ಶಾಲಾ

ಶಿಕ್ಷಣವು ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯ (1.2 ದಶಲಕ್ಷ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಗಳು ಭಾರತದಾದ್ಯಂತ ಅಸ್ತಿತ್ವದಲ್ಲಿದೆ) ಕಾರ್ಯಕ್ಷೇತ್ರಕ್ಕೆ ಸೇರಿದೆಯಾದರೂ, ಪೂರ್ವ ಶಾಲಾ ಶಿಕ್ಷಣವು ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಗಳ ಅತ್ಯಂತ ನಿರ್ಲಕ್ಷ್ಯದ ಅಂಶಗಳಲ್ಲಿ ಒಂದಾಗಿದೆ. ಆದ್ದರಿಂದ ಪೂರ್ವ ಶಾಲಾ ಶಿಕ್ಷಣವನ್ನು ಸಾರ್ವತ್ರಿಕೀಕರಣಗೊಳಿಸುವುದಕ್ಕಾಗಿ ಏನನ್ನು ತೆಗೆದುಕೊಳ್ಳುವುದಿಲ್ಲವೋ ಅದು ಭಾರತೀಯ ಶಾಲಾ ವ್ಯವಸ್ಥೆಯಲ್ಲಿ ಅದರ ಹತ್ತಿರದ ನಿರ್ಲಕ್ಷ್ಯಕ್ಕೆ ಸಮನಾಗಿರುತ್ತದೆ. ಆ ಮಟ್ಟಿಗೆ, ಸಾರ್ವತ್ರಿಕವಾದ ಪ್ರಾಥಮಿಕ ಶಿಕ್ಷಣವನ್ನು ಸಾಧಿಸುವ ವೆಚ್ಚ ಕಡಿಮೆಯಾಗಿದೆ. ಜೊತೆಗೆ ಶಿಕ್ಷಣ ಹಕ್ಕಿನ ವೆಚ್ಚ ಮತ್ತು ಹಣಕಾಸಿನ ಸುತ್ತಲೂ ಇತರ ಸಮಸ್ಯೆಗಳಿವೆ, ಇದನ್ನು ವಿಭಾಗ 2 ರಲ್ಲಿ ನೋಡಬಹುದು.

2. ಶಿಕ್ಷಣ ಹಕ್ಕಿನ ವೆಚ್ಚ

ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕೀಕರಣಗೊಳಿಸುವುದಕ್ಕಾಗಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 2010–2011 ರಿಂದ 2014–2015 ರವರೆಗೆ ಅಂದಾಜು ಮಾಡಿದ ವೆಚ್ಚ ರೂ. 1.71 ಲಕ್ಷ ಕೋಟಿ (ಅಥವಾ 1710 ಬಿಲಿಯನ್). ಒಟ್ಟು ವೆಚ್ಚದ ಅಂದಾಜಿನ ವಿವರವನ್ನು ಮುಂದಿನ ಕೋಷ್ಟಕ – 1 ರಲ್ಲಿ ನೀಡಲಾಗಿದೆ.

ಕೋಷ್ಟಕ – 1

2010–2011 ರಿಂದ 2014–2015 ರವರೆಗಿನ ವಾರ್ಷಿಕ ಒಟ್ಟು ಅಂದಾಜು ಹೆಚ್ಚುವರಿ ವೆಚ್ಚ (ಕೋಟಿ ರೂ.ಗಳಲ್ಲಿ)

ವರ್ಷಗಳು	ಮರುಕಳಿಸದ			ಮರುಕಳಿಸುವ			ಒಟ್ಟು	ಶಿಕ್ಷಕರ ಸಂಬಳದ ಪಾಲು ಶೇಕಡವಾರು	ಮರುಕಳಿಸದ ಶೇಕಡವಾರು	ಮರುಕಳಿಸುವ ಶೇಕಡವಾರು
	ನಾಗರಿಕ ಕೆಲಸ	ಶಾಲೆಗಳಲ್ಲಿನ ಸೌಲಭ್ಯಗಳು	ಮುಖ್ಯವಾಹಿನಿಯಿಂದ ಹೊರಗುಳಿದ ಶಾಲಾ ಮಕ್ಕಳು	ತರಬೇತಿ ಪಡೆಯದ ಶಿಕ್ಷಕರಿಗೆ ವೃತ್ತಿ ತರಬೇತಿ	ಶಿಕ್ಷಕರ ವೇತನ	ಅರ್ಹತೆ ಮತ್ತು ಗುಣಮಟ್ಟದ ಸುಧಾರಣೆ				
2010–2011	6790	940	3578	602	11159	11810	34879	32	34.15	65.85
2011–2012	6790	940	3578	602	11218	11926	35054	32	33.98	66.02
2012–2013	6790	940	3578	602	11277	11910	35097	32.13	33.93	66.07
2013–2014	6790	940	3578	602	11335	11896	35141	32.26	33.89	66.11
2014–2015	6790	940	0	602	11394	11881	31607	36	26.36	73.64
ಒಟ್ಟು	**33950**	**4700**	**14312**	**3010**	**56383**	**59423**	**171778**	**32.8**	**32.58**	**67.42**

ಮೂಲ: ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ.

ಈ ಮೇಲಿನ ಕೋಷ್ಟಕದ ಪ್ರಕಾರ ಪ್ರಸ್ತುತ ಅಂದಾಜು ಮಾಡಿದಂತೆ, ಐದು ವರ್ಷಗಳ ಅವಧಿಗೆ ಶಿಕ್ಷಕರ ವೇತನದ ಒಟ್ಟು ಮೊತ್ತ ಸುಮಾರು ರೂ. 56383 ಕೋಟಿ (ಅಥವಾ ರೂ. 563.83 ಬಿಲಿಯನ್) ನಷ್ಟು ಹೆಚ್ಚುವರಿ ವೆಚ್ಚಕ್ಕೆ ಬರುತ್ತದೆ. ಇದು 2014–2015 ರವರೆಗೆ ಒಟ್ಟು ಹೆಚ್ಚುವರಿ ವೆಚ್ಚದಲ್ಲಿ ಶೇ. 32.8 ರಷ್ಟಾಗಿತ್ತು.

ಶಿಕ್ಷಕರ ವೇತನಕ್ಕಾಗಿ ಹಣಕಾಸಿನ ಅಂದಾಜಿನ ಲೆಕ್ಕವನ್ನು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಮಟ್ಟದಲ್ಲಿ 30:1ರ ವಿದ್ಯಾರ್ಥಿ–ಶಿಕ್ಷಕ ಅನುಪಾತದೊಂದಿಗೆ ತಯಾರಿಸಲಾಗುತ್ತದೆ. ಶಿಕ್ಷಕರ ವೇತನವನ್ನು ಪ್ರಾಥಮಿಕ ಹಂತದ ಎಲ್ಲಾ ಶಿಕ್ಷಕರಿಗೆ ಮತ್ತು ಶೇ. 80ರಷ್ಟು ಹಿರಿಯ ಪ್ರಾಥಮಿಕ ಶಿಕ್ಷಕರಿಗೆ ತಿಂಗಳಿಗೆ ರೂ. 8400 ಹಾಗೂ ಉಳಿದ ಶೇ. 20 ರಷ್ಟು ತರಬೇತಿ ಪಡೆದ ಪದವಿದರ

ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತಿಂಗಳಿಗೆ ರೂ. 11200 ರಷ್ಟು ಎಂದು ರಾಜ್ಯ ಮಟ್ಟದ ವೇತನದಲ್ಲಿ ಅಂದಾಜಿಸಲಾಗಿದೆ. ಆರನೇ ಕೇಂದ್ರ ವೇತನ ಆಯೋಗದ ಪ್ರಕಾರ ಪರಿಷ್ಕೃತ ವೇತನಗಳ ಆಧಾರದ ಮೇಲೆ ಈ ವೇತನ ಮಟ್ಟವನ್ನು ತಲುಪಲಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಶಾಲೆಗಳಿಗೆ ಬರುವ ಮಕ್ಕಳು ಬಡವರ್ಗಕ್ಕೆ ಸೇರಿದವರಾಗಿದ್ದಾರೆ. ಶಿಕ್ಷಕರು ಮತ್ತು ಕಲಿಯುವರ ನಡುವಿನ ಸಾಮಾಜಿಕ ಅಂತರವು ದೊಡ್ಡದಾಗಿದೆ. ಉತ್ತಮ ವೇತನ ಪಡೆಯುವ ಶಿಕ್ಷಕರು ಈ ಬಡ ಮಕ್ಕಳ ಶಿಕ್ಷಣವನ್ನು ಗಂಭೀರವಾಗಿ ತೆಗೆದುಕೊಳ್ಳದಿರುವುದು ಬಹುಶಃ ಇದಕ್ಕೆ ಒಂದು ಕಾರಣವಾಗಿರಬಹುದು.

ಕೋಷ್ಟಕ: 2

ಶಿಕ್ಷಕರ ವೇತನ/ನಾಗರಿಕ ಕೆಲಸ ಹೊರತುಪಡಿಸಿ ಇತರೆ ವೆಚ್ಚದ ವಿವರಗಳು

ಕ್ರಮ ಸಂ.	ವಿಷಯ	2010–2011 ರಿಂದ 2014–2015 ರವರೆಗಿನ ಅಂದಾಜು (ಕೋಟಿ. ರೂ.)	ಒಟ್ಟು ಶೇಕಡಾವಾರು	ವಿವರಗಳು
1	ಶಾಲೆಗಳ ವಾರ್ಷಿಕ ನಿರ್ವಹಣೆ ಅನುದಾನ	5847	3.4	ಪ್ರತಿವರ್ಷದ ಅನುದಾನ (ಎ) ಮೂಲ ಸೌಕರ್ಯ ಮತ್ತು ಸಾಮಗ್ರಿಗಳ ನಿರ್ವಹಣೆ (ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆ ಮಾತ್ರ) (ಬಿ) ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳು (ಸಿ) ಶೇ. 75 ರಷ್ಟು ಮಕ್ಕಳಿಗೆ ಸಮುದಾಯ ಆಧಾರಿತ ಸಂಶೋಧನೆ ಉಸ್ತುವಾರಿ ಮತ್ತು ಮೌಲ್ಯಮಾಪನ ಪಠ್ಯಪುಸ್ತಕಗಳು (ಪ್ರತಿವರ್ಷ ಪ್ರಾ. ಶಾಲೆಯ ಪ್ರತಿ ವಿದ್ಯಾರ್ಥಿಗೆ ರೂ.150 ಮತ್ತು ಹಿ. ಪ್ರಾ. ಶಾಲೆಯ ಪ್ರತಿ ವಿದ್ಯಾರ್ಥಿಗೆ ರೂ.200) ಪ್ರತಿವರ್ಷ ಶೇ.50 ರಷ್ಟು ವಿದ್ಯಾರ್ಥಿಗಳಿಗೆ ಎರಡು ಜೊತೆ ಸಮವಸ್ತ್ರ (ವಾರ್ಷಿಕ ಪ್ರತಿ ವಿದ್ಯಾರ್ಥಿಗೆ 1 ಜೊತೆ ಸಮವಸ್ತ್ರಕ್ಕಾಗಿ ರೂ.200) ಗೃಹ ಆಧಾರಿತ ಶಿಕ್ಷಣ ಪಡೆಯುತ್ತಿರುವ ಗಂಭೀರವಾಗಿ ನಿಷ್ಕ್ರೀಯಗೊಂಡ ಮಕ್ಕಳಿಗೆ (i) ವಸತಿ ಶಿಕ್ಷಣದ ಪ್ರತಿ ಮಗುವಿಗೆ ವಾರ್ಷಿಕ ರೂ.10000/– (ii) ವಸತಿಯೇತರ ಶಿಕ್ಷಣದ ಪ್ರತಿ ಮಗುವಿಗೆ ವಾರ್ಷಿಕ ರೂ.3000/–.
2	ಮಕ್ಕಳ ಪಠ್ಯಪುಸ್ತಕಗಳು ಮತ್ತು ಸ್ಟೇಷನರಿಗಳಿಗಾಗಿ	11,700	6.8	
3	ಮಕ್ಕಳ ಶಾಲಾ ಸಮವಸ್ತ್ರಕ್ಕಾಗಿ	18,452	10.74	
4	ವಿಶೇಷ ಚೇತನ ಮಕ್ಕಳ ಸಮಗ್ರ ಶಿಕ್ಷಣಕ್ಕಾಗಿ	10,241	5.96	
5	ಮುಖ್ಯವಾಹಿನಿಯಿಂದ ಹೊರಗುಳಿಯುವ ಶಾಲಾ ಮಕ್ಕಳಿಗೆ	14,312	8.33	

ಮೂಲ: ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ.

ಒಟ್ಟಾರೆ, 2010–2011ರಿಂದ 2014–2015ರವರೆಗಿನ ಒಟ್ಟು ಹೆಚ್ಚುವರಿ ವೆಚ್ಚಗಳ ಪೈಕಿ ನಾಗರಿಕ ಕೆಲಸಗಳಿಗೆ ಶೇ. 19.8 ರಷ್ಟು ಮತ್ತು ಶಿಕ್ಷಕರ ವೇತನಕ್ಕೆ ಶೇ. 32.8 ರಷ್ಟು ಖರ್ಚಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಸಚಿವಾಲಯದ ಪ್ರಕಾರ ಶಿಕ್ಷಣ ಹಕ್ಕಿನ ಒಟ್ಟು ಹೆಚ್ಚುವರಿ ವೆಚ್ಚದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಶಿಕ್ಷಕರ ವೇತನಕ್ಕೆ ಮತ್ತು ನಾಗರಿಕ ಕೆಲಸಗಳಿಗೆ ವ್ಯಯಿಸಲಾಗುತ್ತದೆ. ಇನ್ನುಳಿದ ಅರ್ಧಭಾಗದಲ್ಲಿ ಶಾಲೆಗಳ ವಾರ್ಷಿಕ ನಿರ್ವಹಣೆ ಅನುದಾನವಾಗಿ ಶೇ. 3.4 ರಷ್ಟನ್ನು, ಮಕ್ಕಳ ಪಠ್ಯಪುಸ್ತಕಗಳು ಮತ್ತು ಸ್ಟೇಷನರಿಗಾಗಿ ಶೇ. 6.8 ರಷ್ಟನ್ನು, ಶಾಲಾ ಸಮವಸ್ತ್ರಗಳಿಗಾಗಿ ಶೇ. 10.7 ರಷ್ಟು, ವಿಶೇಷ ಚೇತನ ಮಕ್ಕಳ ಸಮಗ್ರ ಶಿಕ್ಷಣ ಮತ್ತು ಮುಖ್ಯವಾಹಿನಿಯಿಂದ ಹೊರಗುಳಿಯುವ ಶಾಲಾ ಮಕ್ಕಳಿಗಾಗಿ ಶೇ. 8.33 ರಷ್ಟನ್ನು ನೀಡಲಾಗುತ್ತದೆ (ಕೋಷ್ಟಕ – 2 ನ್ನು ನೋಡಿ). ಶಿಕ್ಷಣ ಹಕ್ಕು ಕಾಯಿದೆಯ ಬದ್ಧತೆಗಳನ್ನು ಪೂರೈಸಲು ಪುನರಾವರ್ತಿತ ವೆಚ್ಚದ ಅವಶ್ಯಕತೆಗಳಿಗೆ

(ಶಿಕ್ಷಕರ ವೇತನ ಸೇರಿದಂತೆ, ಒಟ್ಟು ಹೆಚ್ಚುವರಿ ಅಗತ್ಯಗಳು ಶೇ. 67.42) ಹೆಚ್ಚು ಮಹತ್ವವನ್ನು ಕೊಡಲಾಗಿದೆ, ರಾಜ್ಯಗಳಿಗೆ ಅನುದಾನ ಮತ್ತು ತೆರಿಗೆಗಳನ್ನು ಹಂಚುವ ಜವಾಬ್ದಾರಿಯನ್ನು ಹೊಂದಿರುವ ಹಣಕಾಸು ಆಯೋಗದ ಪಾತ್ರವನ್ನು ಕಡೆಗಣಿಸುವಂತಿಲ್ಲ.

3. ಶಿಕ್ಷಣ ಹಕ್ಕಿನ ಹಣಕಾಸು

ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕೀಕರಣಗೊಳಿಸುವುದಕ್ಕಾಗಿ ಹೆಚ್ಚುವರಿ ಹಣದ ಅವಶ್ಯಕತೆಗಳನ್ನು ಪೂರೈಸಬಹುದೆಂದು ನಿಶ್ಚಿತತೆಯಿಂದ ಹೇಳುವ ಮೊದಲು ನಾವು ಚರ್ಚಿಸಬೇಕಾದ ಹಲವು ಸಮಸ್ಯೆಗಳಿವೆ. ಮೊದಲನೆಯದಾಗಿ 2008ರ ಅಂತ್ಯದಲ್ಲಿ ಪ್ರಾರಂಭವಾದ ಜಾಗತಿಕ ಹಣಕಾಸಿನ ಮತ್ತು ಆರ್ಥಿಕ ಬಿಕ್ಕಟ್ಟಿನ ಕಾರಣದಿಂದಾಗಿ, 2009–2010 ಮತ್ತು ನಂತರ ಆರ್ಥಿಕ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರವು ಪ್ರಾರಂಭಿಸಿದ ಬಹು ಪ್ರಚೋದನೆಯಿಂದಾಗಿ ಹಣಕಾಸಿನ ಕೊರತೆಯು ಹೆಚ್ಚಾಯಿತು. ಪ್ರಸಕ್ತ ಹಣಕಾಸಿನ ಕೊರತೆಯು, ಕೇಂದ್ರ ಮತ್ತು ರಾಜ್ಯಗಳ ಜಿಡಿಪಿ ಅನುಪಾತಕ್ಕೆ ಒಟ್ಟಾರೆಯಾಗಿ ಶೇ. 10 ಕ್ಕಿಂತ ಹೆಚ್ಚಿದೆ. ಇದು 2007–2008ರ ಆರ್ಥಿಕ ವರ್ಷದಲ್ಲಿ ಕೊರತೆಯು ಜಿಡಿಪಿಯ ಶೇ. 7 ರಷ್ಟು ಇದ್ದಾಗ, ಹಣಕಾಸಿನ ಪರಿಸ್ಥಿತಿಯಲ್ಲಿ ಗಮನಾರ್ಹವಾದ ಅಭಾವವನ್ನು ಉಂಟುಮಾಡಿತು. ಹತ್ತನೇ ಪಂಚವಾರ್ಷಿಕ ಯೋಜನೆಯ ಅವಧಿಯ ಹಿಂದಿನ ವರ್ಷಗಳಲ್ಲಿ ಆದ ತ್ವರಿತ ಆರ್ಥಿಕ ಬೆಳವಣಿಗೆಯಿಂದಾಗಿ ತೆರಿಗೆ ಮತ್ತು ತೆರಿಗೆಯೇತರ ವರಮಾನಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ, ಇದರ ಪರಿಣಾಮವಾಗಿ 2007–2008ರಲ್ಲಿ ಕೇಂದ್ರ ಮತ್ತು ರಾಜ್ಯದ ಒಟ್ಟು ಆದಾಯವು ಜಿಡಿಪಿಯ ಶೇ. 20.5 ರಷ್ಟಾಯಿತು, ಇದು ಭಾರತದ ಹಣಕಾಸಿನ ಇತಿಹಾಸದಲ್ಲಿ ಸಾಕಷ್ಟು ಅಭೂತಪೂರ್ವವಾಗಿದೆ. ಇದರ ಜೊತೆಗೆ, 20 ರಾಜ್ಯಗಳಲ್ಲಿ ಹಣಕಾಸಿನ ಜವಾಬ್ದಾರಿ ಮತ್ತು ಮುಂಗಡ ಪತ್ರ ನಿರ್ವಹಣಾ ಕಾಯಿದೆ ಹಾಗೂ ಅವುಗಳ ಸಮಾನ ಕಾಯಿದೆಗಳ ಮೂಲಕ ಕೇಂದ್ರ ಮತ್ತು ರಾಜ್ಯಗಳೆರಡಕ್ಕೂ ಈ ಶಿಸ್ತನ್ನು ವಿಧಿಸಲಾಗಿದೆ, ಇದರಿಂದಾಗಿ ಕಾಲಾನಂತರದಲ್ಲಿ ಹಣಕಾಸಿನ ಕೊರತೆಯಲ್ಲಿ ಕಡಿತ ಉಂಟಾಯಿತು. ಆದರೆ ಈ ಎರಡು ಪ್ರಕ್ರಿಯೆಗಳು ಜಾಗತಿಕ ಮತ್ತು ಹಣಕಾಸಿನ ಬಿಕ್ಕಟ್ಟಿನಿಂದ ರಾಜಿಯಾಗಿವೆ. ಇದರ ಫಲವಾಗಿ ಶಿಕ್ಷಣ ಹಕ್ಕಿನ ಕಾಯಿದೆಯಿಂದಾಗಿ ಪ್ರಾಥಮಿಕ ಶಿಕ್ಷಣದ ಅವಶ್ಯಕತೆಗಳಲ್ಲಿ ಏರಿಕೆ ಉಂಟಾದಾಗ ಸರ್ಕಾರಿ ಮಟ್ಟದ ಎಲ್ಲಾ ಶಾಲೆಗಳಿಗೆ ಕಡಿಮೆ ಸಂಪನ್ಮೂಲಗಳು ಲಭ್ಯವಾಗುತ್ತವೆ.

ಉನ್ನತ ಮಟ್ಟದ ಶಿಕ್ಷಣದ ಬೇಡಿಕೆಗಳಿಂದ ಉಂಟಾಗುವ ಹಣಕಾಸಿನ ಸಂಪನ್ಮೂಲಗಳ ಮೇಲೆ ಮತ್ತೊಂದು ನಿರ್ಬಂಧವಿದೆ. ಹೀಗಾಗಿ, 10ನೇ ಯೋಜನೆ ಅವಧಿಯಲ್ಲಿನ ಉನ್ನತ ಶಿಕ್ಷಣದ ಐದು ಅಂಶಗಳಿಗೆ ಹೋಲಿಸಿದರೆ 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಮಾಧ್ಯಮಿಕ ಶಿಕ್ಷಣಕ್ಕೆ ನಾಮಮಾತ್ರದ ದರದಲ್ಲಿ 12.8 ಅಂಶಗಳಷ್ಟು ಹಂಚಿಕೆಯು ಈಗಾಗಲೇ ಹೆಚ್ಚಾಗಿದೆ (11ನೇ ಯೋಜನೆಯ ಅವಧಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರಿಕೀಕರಣಗೊಳಿಸಲು ಕೇಂದ್ರ ಸರ್ಕಾರವು ರಾಷ್ಟ್ರೀಯ ಕಾರ್ಯಕ್ರಮವನ್ನು ಪ್ರಾರಂಭಿಸಿತು). ದ್ವಿತೀಯ ಮತ್ತು ತೃತೀಯ ಹಂತದ ಶಿಕ್ಷಣಕ್ಕಾಗಿ 11ನೇ ಯೋಜನೆಗೆ ಸಂಬಂಧಿಸಿದ ಬದ್ಧತೆಗಳಲ್ಲಿನ ಈ ಗಮನಾರ್ಹ ಹೆಚ್ಚಳವು ಪ್ರಾಥಮಿಕ ಶಿಕ್ಷಣದ ಅವಶ್ಯಕತೆಗಳ ಮೇಲಿನ ಯೋಜನಾ ಧನಸಹಾಯದಲ್ಲಿ ಸ್ವಾಭಾವಿಕವಾಗಿ ಕೆಳಮುಖ ಒತ್ತಡವನ್ನು ಉಂಟುಮಾಡುತ್ತದೆ. ವಾಸ್ತವವಾಗಿ, ಕಳೆದ ಕೆಲವು ವರ್ಷಗಳಲ್ಲಿ ದ್ವಿತೀಯ ಮತ್ತು ತೃತೀಯ ಮಟ್ಟದ ಶಿಕ್ಷಣಕ್ಕಾಗಿ ಸಾರ್ವಜನಿಕ ಧನಸಹಾಯವನ್ನು ಹೆಚ್ಚಿಸಲು ಸರ್ಕಾರಿ ವಲಯಗಳಲ್ಲಿ ಬಲವಾದ ಪ್ರಯತ್ನವನ್ನು ಮಾಡಲಾಗಿದೆ. ಸಾಮಾನ್ಯವಾಗಿ ಚೀನಾದ ಉಲ್ಲೇಖವನ್ನು ಮಾಡಲಾಗುತ್ತಿತ್ತು, ಇದು ಉನ್ನತ ಶಿಕ್ಷಣದಲ್ಲಿ ಅದರ ಸಂಬಂಧಿತ

ವಯಸ್ಸಿನ–ಸಮಂಜಸತೆಯ ಶೇ.20 ರಷ್ಟನ್ನು ಹೊಂದಿದೆ. ಆದಾಗ್ಯೂ, ಭಾರತದಲ್ಲಿ ದ್ವಿತೀಯ ಹಂತದ ದಾಖಲಾತಿ ಶೇ.57ಕ್ಕೆ ಹೋಲಿಸಿದರೆ, ಚೀನಾದ ದ್ವಿತೀಯ ಹಂತದ ದಾಖಲಾತಿ ಶೇ.74 ರಷ್ಟಿದೆ. ಚೀನಾದ ಸಾಕ್ಷರತೆಯ ಪ್ರಮಾಣ ಶೇ.91 ರಷ್ಟಿದ್ದರೆ (2007–2008), ಭಾರತದ ಸಾಕ್ಷರತೆಯ ದರ ಶೇ.67 ರಷ್ಟಿತ್ತು. ಅದೇ ರೀತಿ ಪ್ರಾಥಮಿಕ ಹಂತದಲ್ಲಿ ಚೀನಾದ ವಿದ್ಯಾರ್ಥಿ–ಶಿಕ್ಷಕ ಅನುಪಾತವು 19:1 ರಷ್ಟಿದ್ದರೆ, ಭಾರತದಲ್ಲಿ ಅದು 40:1 ರಷ್ಟಿದೆ. ಒಂದು ವೇಳೆ ಪ್ರಾಥಮಿಕ ಶಾಲಾ ಮಟ್ಟದಲ್ಲಿ 6–14 ವಯಸ್ಸಿನ ಎಲ್ಲಾ ಮಕ್ಕಳನ್ನು ಸಂಪೂರ್ಣವಾಗಿ ಶಿಕ್ಷಣದ ವ್ಯಾಪ್ತಿಗೆ ನಾವು ತರದೆ ಹೋದರೆ ಮತ್ತು ಏಕಕಾಲದಲ್ಲಿ ಪ್ರಾಥಮಿಕ ಹಂತದಲ್ಲಿ ಪೂರ್ಣಪ್ರಮಾಣದ ದರದಲ್ಲಿ ಹೆಚ್ಚಳವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗದಿದ್ದರೆ ಭಾರತದ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಶೇ. 20 ರಷ್ಟು ದಾಖಲಾತಿಯನ್ನು ಪಡೆಯುವುದು ಕಷ್ಟಕರವಾಗುತ್ತದೆ. ಹೀಗಾಗಿ ಮಾಧ್ಯಮಿಕ ಶಿಕ್ಷಣಕ್ಕೆ ಪರಿವರ್ತನೆ ದರವನ್ನು ಹೆಚ್ಚಿಸುತ್ತದೆ.

ಶಿಕ್ಷಣ ಹಕ್ಕು ಕಾನೂನು ಆಗುತ್ತಿರುವುದರಿಂದ ಅಲ್ಲಿ ಯಾವುದೇ ಆಯ್ಕೆಯಿರುವುದಿಲ್ಲ. ಆದರೆ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ನಿಬಂಧನೆಗಳು ಮತ್ತು ಮಾನದಂಡಗಳನ್ನು ಪೂರೈಸಲು ಸಂಪನ್ಮೂಲಗಳನ್ನು ಕಂಡುಹಿಡಿಯಬಹುದು. ಆದಾಗ್ಯೂ, ರಾಷ್ಟ್ರೀಯ ಹಣಕಾಸಿನ ಕೊರತೆಯಿಂದ ಉಂಟಾಗುವ ಒತ್ತಡಗಳ ಹೊರತಾಗಿಯೂ ಅಲ್ಲಿ ಮತ್ತೊಂದು ಸಮಸ್ಯೆ ಕಂಡು ಬರುತ್ತದೆ: ಒಕ್ಕೂಟ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹೆಚ್ಚಾಗಿರುವ ಹಣಕಾಸಿನ ಹೊರೆಯನ್ನು ಹಂಚಿಕೊಳ್ಳುವ ಬಗ್ಗೆ ಕೇಂದ್ರ ಮತ್ತು ರಾಜ್ಯಗಳು ಕೆಲವು ಒಪ್ಪಂದಗಳಿಗೆ ಬರುವ ಅಗತ್ಯವಿದೆ. ಜೊತೆಗೆ, ಯೋಜನಾ ಆಯೋಗ ಮತ್ತು 13ನೇ ಹಣಕಾಸು ಆಯೋಗಗಳ ಪ್ರಮುಖ ಪಾತ್ರದ ಬಗ್ಗೆ ಕೇಂದ್ರಕ್ಕೆ ಸ್ಪಷ್ಟತೆ ಇರಬೇಕಾಗುತ್ತದೆ. ಯೋಜನಾ ಆಯೋಗ ಮತ್ತು 13ನೇ ಹಣಕಾಸು ಆಯೋಗಗಳ ಜವಾಬ್ದಾರಿಗಳೇನು? ಎಂಬ ಪ್ರಶ್ನೆಗೆ ಸರಳವಾದ ಉತ್ತರವೆಂದರೆ, ಯೋಜನೇತರ ವೆಚ್ಚ (ಹೆಚ್ಚಾಗಿ ಮರುಕಳಿಸುವ ಖರ್ಚುಗಳನ್ನು ಒಳಗೊಂಡಿರುತ್ತದೆ) ಹಣಕಾಸು ಆಯೋಗದ ಜವಾಬ್ದಾರಿಯಾದರೆ, ಯೋಜನಾ ನಿಧಿಯನ್ನು ನಾಗರಿಕ ಕೆಲಸಗಳ ವೆಚ್ಚಕ್ಕೆ ಪೂರೈಸುವ ಜವಾಬ್ದಾರಿ ಯೋಜನಾ ಆಯೋಗದ್ದಾಗಿದೆ. ಈ ಸಂಗತಿಯ ಬಗ್ಗೆ ನಂತರ ಚರ್ಚಿಸೋಣ.

ಒಳ್ಳೆಯದೂ ಅಥವಾ ಕೆಟ್ಟದ್ದೂ, ಭಾರತದ ವೆಚ್ಚದ ವರ್ಗೀಕರಣದಲ್ಲಿ ಯೋಜನೆ ಮತ್ತು ಯೋಜನೇತರ ವೆಚ್ಚಗಳ ನಡುವಿನ ವ್ಯತ್ಯಾಸವು ನಮ್ಮ ದೇಶಕ್ಕೆ ವಿಶಿಷ್ಟವಾಗಿದೆ. ಪ್ರಸ್ತುತವಿರುವ ಯೋಜನೆಗಳನ್ನು ಚಾಲನೆ ಮಾಡಲು ಹೊಸ ಕಾರ್ಯಕ್ರಮ/ಹೊಸ ಯೋಜನೆ/ಹೊಸ ವಿಸ್ತರಣೆಗಳ ಮೇಲೆ ಕೇಂದ್ರೀಕರಿಸುವಂತಹ ವೆಚ್ಚವನ್ನು ಯೋಜನಾ ವೆಚ್ಚವೆಂದು ವ್ಯಾಖ್ಯಾನಿಸಲಾಗಿದೆ. 11ನೇ ಯೋಜನೆಯ ದಾಖಲೆ ಟಿಪ್ಪಣಿಗಳ ಪ್ರಕಾರ ಎರಡು ಕಾರಣಗಳಿಗಾಗಿ ಈ ವ್ಯತ್ಯಾಸವು 'ನಿಷ್ಕ್ರೀಯ' ಮತ್ತು 'ತರ್ಕ ಬದ್ಧವಲ್ಲದ' ಎಂಬುದಾಗಿದೆ. ಮೊದಲನೆಯದಾಗಿ, ಅಸ್ತಿತ್ವದಲ್ಲಿರುವ ಸಾಮರ್ಥ್ಯ ಮತ್ತು ಸೇವೆಯ ಮಟ್ಟಗಳ ನಿರ್ವಹಣೆಯಲ್ಲಿ ಇದು ನಿರ್ಲಕ್ಷ್ಯವನ್ನು ಉಂಟುಮಾಡುತ್ತದೆ, ಮತ್ತು ಎರಡನೆಯದಾಗಿ, ಯೋಜನೇತರ ವೆಚ್ಚವು ವ್ಯರ್ಥವಾಗಿದೆ ಮತ್ತು ಅದನ್ನು ಕಡಿಮೆ ಗೊಳಿಸಬೇಕೆಂಬ ಗ್ರಹಿಸುವಿಕೆಯನ್ನು ಸೃಷ್ಟಿಸುತ್ತದೆ. ಈ ಭಿನ್ನತೆಯು ಹೆಚ್ಚು ಅಸಮರ್ಥನೀಯವಾಗಿದೆ, ಏಕೆಂದರೆ, ವಿಶೇಷವಾಗಿ ಶಿಕ್ಷಣ ಮತ್ತು ಆರೋಗ್ಯದಂತಹ ಪ್ರಮುಖ ಕ್ಷೇತ್ರಗಳಲ್ಲಿನ ಯೋಜನೇತರ ಹುದ್ದೆಗಳ ನೇಮಕಾತಿ ನಿಷೇಧವು ಕಳೆದ ಕೆಲವು ದಶಕಗಳಲ್ಲಿ ಸೇವೆಯ ಗುಣಮಟ್ಟಕ್ಕೆ ಸರಿಪಡಿಸಲಾಗದಂತಹ ಹಾನಿಯನ್ನು ಉಂಟು ಮಾಡಿದ್ದನ್ನು ಇಲ್ಲಿ ಗಮನಿಸಬಹುದು. ಆದಾಗ್ಯೂ, ಈ ಲೇಖನದ ಉದ್ದೇಶಗಳಿಗಾಗಿ ಯೋಜನೆ ಮತ್ತು ಯೋಜನೇತರ ವೆಚ್ಚಗಳ ನಡುವಿನ ವ್ಯತ್ಯಾಸದ ಈ ಅಪಸಾಮಾನ್ಯ ಕ್ರಿಯೆಯನ್ನು (ನಿಷ್ಕ್ರೀಯತೆ) ನಾವು ಬದಿಗೊಡಬೇಕು. ಈಗಿನ ವ್ಯವಸ್ಥೆಯು ಇನ್ನೂ ಅದನ್ನು

ಗುರುತಿಸಿರುವುದರಿಂದ ಮತ್ತು ಅದನ್ನು ರದ್ದು ಪಡಿಸದಿದ್ದರೆ, ಈ ವ್ಯತ್ಯಾಸದ ಆಧಾರದ ಮೇಲೆ ಯೋಜನೆಯನ್ನು ಮುಂದುವರಿಸಬೇಕಾಗುತ್ತದೆ. ಪ್ರಾಥಮಿಕ ಶಿಕ್ಷಣದ ವೆಚ್ಚದ ಅವಶ್ಯಕತೆಗಳಿಗೆ ಈ ವ್ಯತ್ಯಾಸವು ಪ್ರಸ್ತುತತೆಯಾಗಿದೆ.

ಪ್ರಾಥಮಿಕ ಶಿಕ್ಷಣಕ್ಕೆ ಒಟ್ಟು ಯೋಜನಾ ವೆಚ್ಚದಲ್ಲಿ $^3/_4$ ರಷ್ಟು ಭಾಗವು ಕೇಂದ್ರ ಸರ್ಕಾರದಿಂದಲೂ ಮತ್ತು $^1/_4$ ಭಾಗವು ರಾಜ್ಯ ಸರ್ಕಾರದಿಂದ ಬರುತ್ತದೆ (ತಿಲಕ್, 2009). ವಾಸ್ತವವಾಗಿ ಕೇಂದ್ರ ಸರ್ಕಾರದಿಂದ ಯೋಜನಾ ಸಂಪನ್ಮೂಲಗಳ ಹಂಚಿಕೆಯನ್ನು ಪಡೆಯಲು ರಾಜ್ಯ ಸರ್ಕಾರಗಳು ತಮ್ಮ ಯೋಜನಾ ಸಂಪನ್ಮೂಲಗಳ ಪಾಲನ್ನು ಒದಗಿಸಬೇಕು. ಶಿಕ್ಷಣ ಹಕ್ಕಿನ ವೆಚ್ಚದ ಹಿಂದಿನ ವಿಭಾಗದಲ್ಲಿ ನಾವು ಉಲ್ಲೇಖಿಸಿದ ಹೆಚ್ಚುವರಿ ವೆಚ್ಚವು ಯೋಜನಾ ವಿಭಾಗದಡಿಯಲ್ಲಿ ಬರುತ್ತದೆ. ಈ ಯೋಜನಾ ವೆಚ್ಚಗಳನ್ನು ರಾಜ್ಯಗಳು ಅಥವಾ ಕೇಂದ್ರ ಪೂರೈಸಬೇಕಾ? ಎಂಬ ಸಮಸ್ಯೆ ಇಲ್ಲಿ ಉದ್ಭವಿಸುತ್ತದೆ. ಪ್ರಾಥಮಿಕ ಶಿಕ್ಷಣದ ಮೇಲಿನ ಒಟ್ಟು ಯೋಜನೆಯ ಖರ್ಚುಗಳಲ್ಲಿ $^3/_4$ ಭಾಗದಷ್ಟು ಕೇಂದ್ರ ಸರ್ಕಾರವು ಪೂರೈಸುತ್ತದೆ (ನಾವು ಮೇಲೆ ಗಮನಿಸಿದಂತೆ) ಎಂದು ತಿಳಿದರೆ, ಶಿಕ್ಷಣ ಹಕ್ಕು ಕೇಂದ್ರ ಸರ್ಕಾರದ ಕಾನೂನು ಆಗಿರುವುದರಿಂದ ಕೇಂದ್ರವು ಹೆಚ್ಚುವರಿ ವೆಚ್ಚಗಳನ್ನು ತನ್ನದೇ ಆದ ರೀತಿಯಲ್ಲಿ ಪೂರೈಸುತ್ತದೆ ಎಂಬ ನಿರೀಕ್ಷೆ ರಾಜ್ಯಗಳದ್ದಾಗಿದೆ. ಇದು ಕೇಂದ್ರ ಮತ್ತು ರಾಜ್ಯಗಳ ನಡುವೆ ವಿವಾದಾಸ್ಪದವಾಗಿದೆ ಮತ್ತು ರಾಜ್ಯಗಳು ಧನಸಹಾಯ ಜವಾಬ್ದಾರಿಯ ಹಂಚಿಕೆಯನ್ನು ವಿವಾದಾಸ್ಪದ ಸ್ವಭಾವದಿಂದ ನಿರೀಕ್ಷಿಸಬಹುದು ಎಂದು ಸರ್ವ ಶಿಕ್ಷಾ ಅಭಿಯಾನ್ (ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಪ್ರಚಾರ) ಯೋಜನೆಯಲ್ಲಿ ಇತ್ತೀಚೆಗೆ ಸಾಬೀತಾಗಿದೆ. 9ನೇ ಯೋಜನೆಯಲ್ಲಿ ಪ್ರಾಥಮಿಕ ಶಿಕ್ಷಣದ ವೆಚ್ಚದಲ್ಲಿ ಕೇಂದ್ರ: ರಾಜ್ಯಗಳ ಹಂಚಿಕೆ ವ್ಯವಸ್ಥೆ 85:15 (ಅಂದರೆ ಸರ್ವ ಶಿಕ್ಷಾ ಅಭಿಯಾನ್‌ಗಾಗಿ) ರಷ್ಟಿತ್ತು, ಇದು 10ನೇ ಯೋಜನೆಯಲ್ಲಿ 75:25ಕ್ಕೆ ಬದಲಾಯಿತು ಹಾಗೂ ಹೆಚ್ಚಿನ ಚರ್ಚೆಯ ನಂತರ 11ನೇ ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಪಾಲು 65:35 ರಷ್ಟಿದ್ದದ್ದು ಯೋಜನೆಯ ಅಂತಿಮ ವರ್ಷದಲ್ಲಿ(2011–2012) 50:50 ರವರೆಗೆ ಬಂದಿತು.

ಬಹುತೇಕ ಪ್ರಾಥಮಿಕ ಶಿಕ್ಷಣದ ಮೇಲೆ ಮಾಡಿದ ಎಲ್ಲಾ ಯೋಜನೇತರ ವೆಚ್ಚವನ್ನು (ಶೇ.99, ತಿಲಕ್ 2009) ರಾಜ್ಯ ಸರ್ಕಾರಗಳು ಕೈಗೊಂಡಿವೆ. ಈ ವೆಚ್ಚದಲ್ಲಿ ಬಹುಪಾಲು ಶಿಕ್ಷಕರ ವೇತನದ ಮೇಲೆ ಮಾಡಲ್ಪಟ್ಟಿದೆ. ಶಿಕ್ಷಣ ಹಕ್ಕಿನ ಶಿಕ್ಷಕರ ವೇತನದ ಮೇಲೆ ಶೇ.15 ರಷ್ಟು ಹೆಚ್ಚುವರಿ ವೆಚ್ಚವನ್ನು (ಹಿಂದಿನ ಭಾಗ ನೋಡಿ) ರಾಜ್ಯಗಳು ಯೋಜನೇತರ ನಿಧಿಗಳಿಂದ ಪೂರೈಸಬೇಕೆನ್ನುವುದು ಅಸಂಭವವಾಗಿದೆ. ಇದು ಬಹುತೇಕ ಕೇಂದ್ರ ಸರ್ಕಾರದ ಯೋಜನಾ ನಿಧಿಯ ಅಡಿಯಲ್ಲಿ ಬರುತ್ತದೆ. ಆದರೂ, ವಾಸ್ತವವಾಗಿ ಪ್ರಾಥಮಿಕ ಶಿಕ್ಷಣಕ್ಕಾಗಿ ತನ್ನ ಯೋಜನಾ ನಿಧಿಯಲ್ಲಿ $^3/_4$ ನೇ ಭಾಗದಷ್ಟು ಕೇಂದ್ರ ಸರ್ಕಾರವು ಪೂರೈಸಿರುವುದನ್ನು ನಾವು ನೋಡಿದ್ದೇವೆ. ವಾಸ್ತವವಾಗಿ, ಯೋಜನೆ ಮತ್ತು ಯೋಜನೇತರ ಒಟ್ಟು ವೆಚ್ಚದಲ್ಲಿ ಒಟ್ಟು ಪ್ರಾಥಮಿಕ ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರದ ಪಾಲು (ಕೇಂದ್ರ ಮತ್ತು ರಾಜ್ಯಗಳು ಒಟ್ಟಾಗಿ) 2001–2002ರಲ್ಲಿ ಶೇ. 11 ರಷ್ಟಿದ್ದದ್ದು 2007–2008ರ ವೇಳೆಗೆ ಶೇ. 27ಕ್ಕೆ ಹೆಚ್ಚಿತು ಹಾಗೆಯೇ ರಾಜ್ಯ ಸರ್ಕಾರಗಳ ಪಾಲು ಕುಸಿಯಿತು (ತಿಲಕ್, 2009). ಆದರೂ, ಶಿಕ್ಷಣ ಹಕ್ಕಿನ ಪರಿಣಾಮವಾಗಿ ರಾಜ್ಯಗಳು ಯೋಜನಾ ಮತ್ತು ಯೋಜನೇತರ ವೆಚ್ಚಗಳೆರಡರಲ್ಲಿ ಸಂಪೂರ್ಣವಾದ ಹೆಚ್ಚಳವನ್ನು ಹೊಂದಬಹುದೇ ಎಂಬ ಯಾವುದೇ ಪ್ರಶ್ನೆ ಉದ್ಭವಿಸುವುದಿಲ್ಲ, ಇದರ ಅರ್ಥವೇನೆಂದರೆ ರಾಜ್ಯಗಳು ತಮ್ಮ ವೆಚ್ಚಗಳನ್ನು ಯೋಜನೇತರ ಅಡಿಯಲ್ಲಿ ಹೆಚ್ಚಿಸಬೇಕೆಂದು ಅರ್ಥೈಸಿಕೊಳ್ಳುವುದಿಲ್ಲ. ಯಾವುದೇ ಸಂದರ್ಭದಲ್ಲಿ $^1/_4$ ನೇ ಭಾಗದಷ್ಟು ಯೋಜನಾ ವೆಚ್ಚವನ್ನು ರಾಜ್ಯಗಳು ಪೂರೈಸಲೇಬೇಕು. ಹೀಗಾಗಿ ವೆಚ್ಚದ ಗಾತ್ರವು ಕೂಡ ಹೆಚ್ಚಾಗುತ್ತದೆ.

ಪ್ರಾಥಮಿಕ ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರದ ಯೋಜನಾ ನಿಧಿಯ ಪಾಲು ಸ್ಥಿರವಾಗಿ ಹೆಚ್ಚುತ್ತಿದೆ. ಪ್ರಾಥಮಿಕ ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರದ ನಿಧಿಗಳು ಎರಡು ಮೂಲಗಳಿಂದ ಬರುತ್ತವೆ. ಶಿಕ್ಷಣ ಸೆಸ್, ಇದು ಒಂದು ವಿಶಿಷ್ಟ ಉದ್ದೇಶಕ್ಕಾಗಿ ತೆಗೆದಿಟ್ಟ ಆದಾಯ ತೆರಿಗೆ ಮೇಲಿನ ತೆರಿಗೆಯಾಗಿದೆ: ಇದು ಪ್ರಾಥಮಿಕ ಶಿಕ್ಷಣಕ್ಕಾಗಿ ಮೀಸಲಿಟ್ಟ ನಿಧಿಗೆ ನೇರವಾಗಿ ಹೋಗುತ್ತದೆ (ಅಥವಾ ಪ್ರಾರಂಭಿಕ ಶಿಕ್ಷಾ ಕೋಶ್): ಮತ್ತು ಒಟ್ಟು ಆಯವ್ಯಯ ಬೆಂಬಲ, ಇದು ಕೇಂದ್ರ ಸರ್ಕಾರದ ಸಾಮಾನ್ಯ ಆದಾಯದ ಮೂಲದಿಂದ ಬರುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ಶಿಕ್ಷಣ ಸೆಸ್‌ನಿಂದ ಬಂದಂತಹ ಕೊಡುಗೆಗಳು ಹೆಚ್ಚಿವೆ (2006/2007 ರಿಂದ 2008/2009), ಜೊತೆಗೆ ಸರ್ವ ಶಿಕ್ಷಾ ಅಭಿಯಾನಕ್ಕೆ (ಪ್ರಾಥಮಿಕ ಶಿಕ್ಷಣ) ಕೇಂದ್ರ ಸರ್ಕಾರದ ಹಂಚಿಕೆ ಮೂರು ವರ್ಷಗಳಲ್ಲಿ ಅನುಕ್ರಮವಾಗಿ ಶೇ.53, ಶೇ.66 ಮತ್ತು ಶೇ.59 ರಷ್ಟು ಸೆಸ್‌ನ್ನು ಅಂದಾಜಿಸಲಾಗಿದೆ (ಸಿಪಿಆರ್ ಬಜೆಟ್, 2009/2010). ಶಿಕ್ಷಣ ಹಕ್ಕಿನ ವೆಚ್ಚಗಳನ್ನು ಪೂರೈಸಲು ಕೇಂದ್ರ ಸರ್ಕಾರವು ಪ್ರಾಥಮಿಕ ಶಿಕ್ಷಣ ನಿಧಿಯ ಮೇಲಿನ ಸೆಸ್‌ನ್ನು ಹೆಚ್ಚಿಸಲು ನಿರ್ಧರಿಸುತ್ತದೆಯೋ ಅಥವಾ ಸಾಮಾನ್ಯ ಆದಾಯ ಹೆಚ್ಚಳವನ್ನು ಅವಲಂಭಿಸಿರುತ್ತದೊ ಎಂಬುದನ್ನು ನೋಡಲು ಕಾಯಬೇಕಾಗುತ್ತದೆ.

ರಾಜ್ಯಗಳು, ಅದರಲ್ಲೂ ವಿಶೇಷವಾಗಿ ಶೈಕ್ಷಣಿಕವಾಗಿ ಹಿಂದುಳಿದ ರಾಜ್ಯಗಳು ಹೇಗೆ ತಮ್ಮ ಜವಬ್ದಾರಿಗಳನ್ನು ಶಿಕ್ಷಣ ಹಕ್ಕಿನ ಅಡಿಯಲ್ಲಿ ನೆರವೇರಿಸಿಕೊಳ್ಳುತ್ತವೆ? ಎಂಬ ದೊಡ್ಡ ಕಳವಳ ಇನ್ನು ಉಳಿದುಕೊಂಡಿದೆ: 2005–2010 ರ ಅವಧಿಯನ್ನು ಒಳಗೊಂಡ 12ನೇ ಹಣಕಾಸು ಆಯೋಗವು ಶೈಕ್ಷಣಿಕವಾಗಿ ಹಿಂದುಳಿದ ರಾಜ್ಯಗಳಿಗೆ ನಿರಾಶಾದಾಯಕವಾಗಿತ್ತು ಎಂಬ ಅಂಶದಿಂದ ಈ ದ್ವಂದ್ವ ಹುಟ್ಟಿಕೊಂಡಿದೆ. ಉತ್ತರ ಮತ್ತು ಪೂರ್ವ ರಾಜ್ಯಗಳ ಕಳಪೆ ಶೈಕ್ಷಣಿಕ ಕಾರ್ಯಕ್ಷಮತೆಗೆ ಒಂದು ಪ್ರಮುಖ ಕಾರಣವೆಂದರೆ, ರಾಷ್ಟ್ರೀಯ ಸರಾಸರಿಗೆ ಹೋಲಿಸಿದರೆ ಪ್ರಾಥಮಿಕ ಹಂತದಲ್ಲಿ ಪ್ರತಿ ವಿದ್ಯಾರ್ಥಿಗೆ ಮಾಡುವ ವೆಚ್ಚ ಕಡಿಮೆಯಾಗಿರುವುದು. ಹಣಕಾಸಿನ ಆಯೋಗವು ಅನುದಾನ ರೂಪದಲ್ಲಿ ಹಣವನ್ನು ರಾಜ್ಯಗಳಿಗೆ ಹಂಚಿಕೆ ಮಾಡುತ್ತದೆ ಮತ್ತು ಅವುಗಳಿಗೆ ತೆರಿಗೆ ಆದಾಯವನ್ನು ವಿನಿಯೋಗಿಸುತ್ತದೆ, 2005–2010ರಲ್ಲಿ ಪ್ರತಿ ವಿದ್ಯಾರ್ಥಿಯ ನಡುವಿನ ಅಂತರದ ಶೇ.10 ರಷ್ಟು ಕೇವಲ ಹಿಂದುಳಿದ ರಾಜ್ಯಗಳ ಪ್ರಾಥಮಿಕ ಶಿಕ್ಷಣ ವೆಚ್ಚ ಮತ್ತು ರಾಷ್ಟ್ರೀಯ ಸರಾಸರಿಯು ಮೀಸಲಿಟ್ಟ ಅನುದಾನದಿಂದ ಪೂರೈಸಲ್ಪಟ್ಟಿದೆ ಎಂದು ಖಚಿತಪಡಿಸಿಕೊಳ್ಳಬಹುದು. ಇದು ಸಂಪೂರ್ಣವಾಗಿ ಕಷ್ಟಕರವಾಗಿದೆ. ಹಾಗಾಗಿ, ಈ ಅಂತರವನ್ನು ಯೋಜನೇತರ ಕನಿಷ್ಠ ವೆಚ್ಚಗಳಿಂದ 13ನೇ ಹಣಕಾಸಿನ ಆಯೋಗದ ಶಿಫಾರಸ್ಸಿನ ಮೇರೆಗೆ ತುಂಬಿಕೊಳ್ಳಬೇಕಾಗಿದೆ. ಅಂದರೆ, 2010–2015ರ ಅವಧಿಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಮೀಸಲಿಡುವ ಅನುದಾನಗಳನ್ನು ಪ್ರಮುಖವಾಗಿ ಹೆಚ್ಚಿಸಬೇಕು.

ಅಂತಿಮ ಸಮಸ್ಯೆಯು ಸಂಪನ್ಮೂಲಗಳನ್ನು ಹೀರಿಕೊಳ್ಳುವ ರಾಜ್ಯಗಳ ಸಾಮರ್ಥ್ಯದ ಬಗ್ಗೆ ಸಂಬಂಧಿಸಿದೆ. ಈ ಸಮಸ್ಯೆಯನ್ನು ಸರ್ವ ಶಿಕ್ಷಾ ಅಭಿಯಾನದ (ಎಸ್ ಎಸ್ ಎ) ಹಂಚಿಕೆಗೆ ಸಂಬಂಧಿಸಿದ ಸಂಬಂಧ ಇಲ್ಲವೆ ಅನುಪಾತವನ್ನು ಪರಿಶೀಲಿಸುವ ಮೂಲಕ ಹಾಗೂ ಸರ್ವ ಶಿಕ್ಷಾ ಅಭಿಯಾನಕ್ಕೆ ಬಿಡುಗಡೆ ಮಾಡುವ ವೆಚ್ಚದ ಅನುಪಾತವನ್ನು ಪರಿಕ್ಷೀಸುವ ಮೂಲಕ ವಿವರಿಸಬಹುದು. ಸರ್ವ ಶಿಕ್ಷಾ ಅಭಿಯಾನವನ್ನು ರಾಜ್ಯ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಮೂಲಕ ಸರ್ಕಾರಿ ಅನುಷ್ಠಾನ ಸಂಸ್ಥೆ ಜಾರಿಗೊಳಿಸುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಹಣವು ಅನುಷ್ಠಾನ ಮಾಡುವ ಸಂಸ್ಥೆಗೆ ಬಿಡುಗಡೆಗೊಳ್ಳಲು ಅನೇಕ ಪ್ರಮುಖ ತಡೆಗಳಿವೆ. ಎಲ್ಲಾ ರಾಜ್ಯಗಳನ್ನು ಒಟ್ಟಾಗಿ ತೆಗೆದುಕೊಂಡರೆ, ವೆಚ್ಚ ಹಂಚಿಕೆಯ ಅನುಪಾತವು 2006/2007ರಲ್ಲಿ ಶೇ.70 ರಷ್ಟಿತ್ತು ಅಥವಾ ಶೇ.30 ರಷ್ಟು ಹಣವು ಖರ್ಚಾಗದೆ ಉಳಿದಿತ್ತು. 2007/2008 ರಲ್ಲಿ ವೆಚ್ಚ ಬಿಡುಗಡೆ ಅನುಪಾತ ಎಲ್ಲ ರಾಜ್ಯಗಳಲ್ಲಿ ಶೇ.78 ರಷ್ಟಿತ್ತು. ಹೀಗಾಗಿ ಸಂಸ್ಥೆಗಳಿಗೆ ಬಿಡುಗಡೆಯಾದ ನಿಧಿಗಳಲ್ಲಿ ಶೇ.22ರಷ್ಟು ಹಣವು ಖರ್ಚಾಗದೆ ಉಳಿದಿತ್ತು.

2007/2008ರಲ್ಲಿ ಬಹುತೇಕ ಶೈಕ್ಷಣಿಕವಾಗಿ ಹಿಂದುಳಿದಿದ್ದ ರಾಜ್ಯಗಳಲ್ಲಿ ವೆಚ್ಚ ಬಿಡುಗಡೆಯ ಅನುಪಾತವು ಶೇ.78ಕ್ಕಿಂತ ಹೆಚ್ಚು ಕೆಟ್ಟದಾಗಿದೆ ಎಂಬುದನ್ನು ಕೋಷ್ಟಕ–3ರಲ್ಲಿ ತೋರಿಸಲಾಗಿದೆ.

<u>ಕೋಷ್ಟಕ – 3</u>

ಶೈಕ್ಷಣಿಕವಾಗಿ ಹಿಂದುಳಿದ ರಾಜ್ಯಗಳಿಂದ ಬಳಸಲ್ಪಟ್ಟ ಸರ್ವ ಶಿಕ್ಷಾ ಅಭಿಯಾನದ ನಿಧಿಗಳು

ಕ್ರ. ಸಂ.	ರಾಜ್ಯಗಳು	2005–2006		2006–2007		2007–2008		2008–2009		2009–2010	ಒಟ್ಟು (2005–2010)
		ಮಂಜೂರು	ಬಿಡುಗಡೆ	ಮಂಜೂರು	ಬಿಡುಗಡೆ	ಮಂಜೂರು	ಬಿಡುಗಡೆ	ಮಂಜೂರು	ಬಿಡುಗಡೆ	ಮಂಜೂರು	ಮಂಜೂರು
1	ಅಸ್ಸಾಂ	183.20	183.20	200.60	200.60	219.66	109.83	240.53	120.27	263.38	1107.37
2	ಬಿಹರ	443.99	443.99	486.17	486.17	532.36	266.18	582.93	291.47	638.31	2683.76
3	ಜಾರ್ಖಂಡ್	107.82	107.82	118.06	59.03	129.28	66.64	141.56	70.78	155.01	651.73
4	ಮ.ಪ್ರ.	76.03	76.03	83.25	83.25	91.16	91.16	99.82	49.91	109.30	459.56
5	ಒರಿಸ್ಸಾ	53.49	53.46	58.57	58.57	64.13	64.13	70.22	35.11	76.89	323.30
6	ರಾಜಸ್ಥಾನ	20.00	20.00	20.00	20.00	20.00	10.00	20.00	10.00	20.00	100.00
7	ಉ.ಪ್ರ.	736.87	736.87	806.87	806.87	883.52	441.76	967.45	483.73	1059.36	4454.07
8	ಪ.ಬಂ.	64.83	64.83	70.99	35.50	77.73	38.86	85.11	42.56	93.20	391.86
	ಒಟ್ಟು	1686.23	1653.79	1844.51	1749.99	2017.84	1088.56	2207.62	1103.81	2415.45	10171.65

ಮೂಲ: ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ.

ಬೇರೆ ರೀತಿಯಲ್ಲಿ ಹೇಳುವುದಾದರೆ, ಹಣಕಾಸು ಲಭವಿದ್ದರೂ ಸಹ, ದುರ್ಬಲ ರಾಜ್ಯಗಳ ಸಾಮರ್ಥ್ಯದ ಸುತ್ತಲೂ ಅನೇಕ ಸಮಸ್ಯೆಗಳಿವೆ, ಇದು ಹೆಚ್ಚಿನ ಮಕ್ಕಳನ್ನು ಶಾಲೆಯಿಂದ ಹೊರಗುಳಿಯುವಂತೆ ಮಾಡುತ್ತದೆ ಮತ್ತು ದೇಶದಲ್ಲಿ ಶಿಕ್ಷಣ ಹಕ್ಕನ್ನು ಸಾಧಿಸಬೇಕಾದರೆ ಲಭ್ಯವಿರುವ ಹಣವನ್ನು ಹೀರಿಕೊಳ್ಳಲು ಹೆಚ್ಚಿನ ಸಂಪನ್ಮೂಲಗಳು ಕೂಡ ಅಗತ್ಯವಾಗುತ್ತದೆ.

ಶಿಕ್ಷಣ ಹಕ್ಕಿನ ಸಾಧನೆಗೆ ಕೇವಲ ಸರ್ಕಾರಿ ಹಣಕಾಸು ಮಾತ್ರ ಸಂಭಾವ್ಯ ಮೂಲವಲ್ಲ. ಇತರ ಮೂಲಗಳು ಕೂಡ ಲಭ್ಯವಿದೆ. ಮೊದಲಿಗೆ 1990 ರಿಂದಲೂ ಭಾರತ ಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕಾಗಿ ಹೊರಗಿನ ಆರ್ಥಿಕ ನೆರವನ್ನು ಸ್ವೀಕರಿಸಿದೆ, ಜಾಗತಿಕ ಆರ್ಥಿಕ ಬಿಕ್ಕಟ್ಟಿನ ನಂತರ (2008ರ ಆರಂಭದಲ್ಲಿ) ಕೇಂದ್ರ ಮತ್ತು ರಾಜ್ಯಗಳ ಹಣಕಾಸಿನ ಕೊರತೆಯು ಗಣನೀಯವಾಗಿ ಹೆಚ್ಚಾಗಿರುವುದರಿಂದ, ಭಾರತ ಬಾಹ್ಯ ಮೂಲಗಳನ್ನು ಹುಡುಕುವ ಬಗ್ಗೆ, ಗಾಡವಾಗಿ ಯೋಚಿಸಬೇಕಾಗಿದೆ. 2008 ರಿಂದೀಚೆಗೆ, ವಿಶ್ವ ಬ್ಯಾಂಕ್ ವರ್ಗೀಕರಣದಡಿಯಲ್ಲಿ ಭಾರತ ಕಡಿಮೆ ಆದಾಯದ ರಾಷ್ಟ್ರವಾಗಿ ಉಳಿದಿಲ್ಲ. ಹೀಗಾಗಿ ಅದು ಬಹುಪಕ್ಷೀಯ ಹಣಕಾಸು ಸಂಸ್ಥೆಗಳ ಮೃದು ಸಾಲದ ಕಿಟಕಿಯ ಸೌಲಭ್ಯಕ್ಕೆ ಅರ್ಹತೆ ಪಡೆಯುವುದಿಲ್ಲ. ಇನ್ನೊಂದು ರೀತಿ ಹೇಳುವುದಾದರೆ, ಪ್ರಾಥಮಿಕ ಶಿಕ್ಷಣದ ಅಗತ್ಯಗಳು ಹೆಚ್ಚಾದಂತೆ ನಿಧಿಯ ಅವಶ್ಯಕತೆ ಹೆಚ್ಚುತ್ತದೆ, ಆದರೆ ಎರಡು ಹೊಸ ನಿರ್ಬಂಧಗಳು ಹೊರ ಹೊಮ್ಮಿವೆ: ಹೆಚ್ಚಾಗುವ ಹಣಕಾಸಿನ ಕೊರತೆಯು ಬೃಹತ್ ಆರ್ಥಿಕ ಅಸ್ಥಿರತೆಯನ್ನು ಉಂಟುಮಾಡದೆ ಮತ್ತಷ್ಟು ಹೆಚ್ಚುವುದಿಲ್ಲ ಮತ್ತು ಬಾಹ್ಯ ಹಣಕಾಸಿನ ಮೃದು ಸಾಲದ ಕಿಟಕಿಯನ್ನು ಮುಚ್ಚುತ್ತದೆ. ವಾಸ್ತವವಾಗಿ 11ನೇ ಪಂಚವಾರ್ಷಿಕ ಯೋಜನೆಯ ಸಂದರ್ಭದಲ್ಲಿ ದೇಶಿಯ ಬಂಡವಾಳ ಮತ್ತು ಅದರ ಬಳಕೆಯ ಬೇಡಿಕೆಯನ್ನು ಹೆಚ್ಚಿಸಲು ಹಣಕಾಸಿನ ಪ್ರಚೋದನೆಯ ಭಾಗವಾಗಿ ಮತ್ತು ಬಾಹ್ಯ ಬೇಡಿಕೆಯ ಕುಸಿತದ ಪರಿಣಾಮಗಳನ್ನು ಪ್ರತಿರೋಧಿಸಲು ಮೂಲಭೂತ ಸೌಕರ್ಯ ಮತ್ತು ಗ್ರಾಮೀಣಾಭಿವೃದ್ಧಿ ವೆಚ್ಚದಲ್ಲಿ ಹಠಾತ್ತನೆ ಮತ್ತು ತೀವ್ರವಾದ ಏರಿಕೆ ಕಂಡು ಬಂದಿದ್ದು ನಮಗೆ ಗೊತ್ತೆ ಇದೆ.

ಈ ಹಣಕಾಸಿನ ಪ್ರಚೋದನೆಯ ಸ್ವಯಂ ಚಾಲಿತ ಹಣಕಾಸಿನ ದುಸ್ಥಿತಿಯ ಪರಿಣಾಮವನ್ನು ಬಿಡಲಾಗಿದೆ ಮತ್ತು ಈ ಭಾವನೆಯು 11ನೇ ಯೋಜನೆಯಲ್ಲಿ ಆರೋಗ್ಯ ಮತ್ತು ಶಿಕ್ಷಣವೆಂಬ ಎರಡು ದೊಡ್ಡ ವಸ್ತುಗಳ ಪ್ರವೇಶ ಪಟ್ಟಿಯಲ್ಲಿ

ಮುಂದುವರಿಯುತ್ತಿದೆ. ಏಕೆಂದರೆ ಯೋಜನೆಯ ಪ್ರಾರಂಭದ ಅವಧಿಯ 2007 ಹಂಚಿಕೆಗಳಲ್ಲಿ ಹೆಚ್ಚಿನ ಏರಿಕೆ ಕಂಡುಬಂದ ಎರಡು ಕ್ಷೇತ್ರಗಳು ಇವುಗಳಾಗಿವೆ. ಹೀಗಾಗಿ, ಪ್ರಾಥಮಿಕ ಶಿಕ್ಷಣಕ್ಕಾಗಿ ಹೆಚ್ಚಿನ ಹಣಕಾಸಿನ ಸಹಾಯಕ್ಕಾಗಿ, ಭಾಗಶಃ ಹಣಕಾಸು ಅಂತರವನ್ನು ಪರಿಹರಿಸುವುದಕ್ಕಾದರೂ ಭಾರತ ಪ್ರಮುಖ ದ್ವಿಪಕ್ಷೀಯ ದಾನಿಗಳನ್ನು ಸಮೀಪಿಸಲು ಆಲೋಚಿಸಬೇಕು.

1990ರ ದಶಕದುದ್ದಕ್ಕೂ 2002/2003 ರಿಂದ ಕೆಲವು ಬದಲಾವಣೆಗಳೊಂದಿಗೆ (ಕೋಲ್ಕ್ಲೊಗ್ ಮತ್ತು ಡಿ. 2010) ಶಿಕ್ಷಣದ ದನಸಹಾಯದ ನೈಜ ಮೌಲ್ಯವು ತ್ವರಿತಗತಿಯಲ್ಲಿ ಹೆಚ್ಚುತ್ತಿರುವುದನ್ನು ದತ್ತಾಂಶಗಳು ದೃಢೀಕರಿಸುತ್ತವೆ. ಮತ್ತೊಂದೆಡೆ, ವಲಯದ ಅಭಿವೃದ್ಧಿಯ ವೆಚ್ಚದಲ್ಲಿ ವ್ಯಕ್ತಪಡಿಸಿದಾಗ, ಅದರ ಪಾತ್ರವು ಹೆಚ್ಚು ಗಣನೀಯವಾಗಿದೆ, ಶಿಕ್ಷಣದ ಮೇಲಿನ ಕೇಂದ್ರ ಸರ್ಕಾರದ ಯೋಜನಾ ವೆಚ್ಚವು 1993–1994ರಲ್ಲಿ ಶೇ. 5 ರಷ್ಟಿತ್ತು. ಆದರೆ ಅದು 2000–2001ರ ವೇಳೆಗೆ ಶೇ. 20ರಷ್ಟಾಯಿತು (ತಿಲಕ್, 2008). ಪ್ರಾಥಮಿಕ ಶಿಕ್ಷಣಕ್ಕಾಗಿ ಈ ಪ್ರಮಾಣವು ಗಣನೀಯವಾಗಿ ಏರಿಕೆಯಾಗಿದೆ, ಅಲ್ಲಿ ನೆರವು ಕೇಂದ್ರೀಕೃತವಾಗಿದ್ದರಿಂದ, ಅದು ಆ ವರ್ಷಗಳಲ್ಲಿ ಶೇ. 10 ರಿಂದ ಶೇ. 35ರಷ್ಟು ಹೆಚ್ಚಿತು. ಇದು ಹಲವು ವರ್ಷಗಳಿಂದ ಭಾರತದಲ್ಲಿ ಪ್ರಾಥಮಿಕ ಶಿಕ್ಷಣ ವೆಚ್ಚಗಳ ಅಭಿವೃದ್ಧಿ ವೆಚ್ಚದ ಬಂದು ಭಾಗವಾಗಿ ನೆರವು ದಾನಿಗಳು ಹಣಕಾಸು ಒದಗಿಸುತ್ತಿರುವುದನ್ನು ಸೂಚಿಸುತ್ತದೆ (ಕೊಲ್ಕ್ಲೊ ಮತ್ತು ಡಿ. 2010 ಸರಿಯಾಗಿ ಗಮನಿಸಿ). ಪ್ರಾಥಮಿಕ ಶಿಕ್ಷಣಕ್ಕಾಗಿ ದ್ವಿಪಕ್ಷೀಯ ಸಾಲವನ್ನು ಹೆಚ್ಚಿಸಲು ಭಾರತವು ಸಿದ್ದವಾಗುವ ಸಮಯ ಈಗ ಬಂದಿದೆ. ಈ ಸಾಲಗಳನ್ನು ಪೂರೈಸುವುದು ಭಾರತಕ್ಕೆ ತುಲನಾತ್ಮಕವಾಗಿ ಸುಲಭವಾಗಲಿದೆ, ಏಕೆಂದರೆ ಜಾಗತಿಕ ಬಿಕ್ಕಟ್ಟಿನಿಂದಾಗಿ ಅದರ ಅತಿದೊಡ್ಡ ವಿದೇಶಿ ವಿನಿಮಯ ನಿಕ್ಷೇಪಗಳು ದೊರೆತಿವೆ. ಬಹುಪಕ್ಷೀಯ ಹಣಕಾಸನ್ನು ಇನ್ನೂ ಪರಿಶೋಧಿಸಬಹುದು, ಏಕೆಂದರೆ ದ್ವಿಪಕ್ಷೀಯರಿಂದ ಎರವಲು ಪಡೆಯುವುದರ ಬದಲು, ಕಡಿಮೆ ಆದಾಯ ದೇಶವಾಗಿ ಸ್ಥಗಿತಗೊಂಡ ನಂತರ ಆ ದೇಶಕ್ಕೆ ಪರಿವರ್ತನೆಯ ಅವಧಿಯು ಇರುತ್ತದೆ.

ಶಿಕ್ಷಣ ಹಕ್ಕಿನ ಅವಶ್ಯಕತೆಗಳನ್ನು ಪೂರೈಸಲು ಹೆಚ್ಚುವರಿ ಸಂಪನ್ಮೂಲಗಳನ್ನು ಕಂಡುಹಿಡಿಯುವ ಎರಡನೇ ವಿಧಾನವೆಂದರೆ ಖಾಸಗಿ–ಸಾರ್ವಜನಿಕ ಪಾಲುದಾರಿಕೆ. ಕಳೆದ ಕೆಲವು ವರ್ಷಗಳಲ್ಲಿ ಸಾಮಾಜಿಕ ಕ್ಷೇತ್ರಗಳಲ್ಲಿ ಖಾಸಗಿ–ಸಾರ್ವಜನಿಕ ಪಾಲುದಾರಿಕೆಗೆ ಹೆಚ್ಚು ಒತ್ತು ನೀಡಲಾಗಿದೆ. ಒಂದು ವೇಳೆ ಸಂಪನ್ಮೂಲದ ತೊಂದರೆ ಕಂಡುಬಂದರೆ, ಸರ್ಕಾರವು ಹಣಕಾಸಿನ ತೊಂದರೆಯಿಂದ ಹೊರಬರಲು ಹೊಸ ವಿಧಾನಗಳನ್ನು ಹುಡಕಬೇಕಾಗುತ್ತದೆ. ವಿಶೇಷವಾಗಿ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಶಿಕ್ಷಣದಲ್ಲಿ ಖಾಸಗಿ–ಸಾರ್ವಜನಿಕ ಪಾಲುದಾರಿಕೆ ಇರುವ ಅನೇಕ ಉದಾಹರಣೆಗಳು ಇಲ್ಲ. ಆದಾಗ್ಯೂ ಶಿಕ್ಷಣದಲ್ಲಿ ಖಾಸಗಿ–ಸಾರ್ವಜನಿಕ ಪಾಲುದಾರಿಕೆ ಕಾರ್ಯ ಸಾಧ್ಯವಾದಲ್ಲಿ ಮತ್ತು ಅದರ ನ್ಯಾಯ ಸಮ್ಮತವಾದ ಉದ್ದೇಶವು ದುರ್ಬಲಗೊಂಡಿಲ್ಲವೊ ಅಲ್ಲಿ ಅದನ್ನು ಅನುಸರಿಸಬಹುದು. ಈಗಾಗಲೇ ಇದು ಅನುಸರಿಸಲ್ಪಟ್ಟಿದೆ, ಆದರೆ ಇದು ಮಾಧ್ಯಮಿಕ ಹಂತದ ಶಿಕ್ಷಣಕ್ಕೆ ಮಾತ್ರ ಸೀಮಿತವಾಗಿದೆ, ಅಲ್ಲಿ 6000 ಉನ್ನತ ಗುಣಮಟ್ಟದ ಶಾಲೆಗಳನ್ನು ಪಿಪಿಪಿ ಕ್ರಮದಲ್ಲಿ ಸ್ಥಾಪಿಸಬೇಕು.

ಹೆಚ್ಚುವರಿ ಸಂಪನ್ಮೂಲಗಳನ್ನು ಹುಡುಕುವ ಮೂರನೇ ವಿಧಾನವೆಂದರೆ, ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಸಚಿವಾಲಯದ ಸಲಹೆಯಂತೆ ಪ್ರಸ್ತಾವಿತ ರಾಷ್ಟ್ರೀಯ ಶಿಕ್ಷಣ ಹಣಕಾಸು ಸಂಸ್ಥೆಯು ದಾಖಲಾತಿಯನ್ನು ಹೆಚ್ಚಿಸಲು ಮತ್ತು ಮೂಲಭೂತ ಸೌಕರ್ಯವನ್ನು ಉತ್ತಮ ಪಡಿಸಲು ಶಾಲಾ ಶಿಕ್ಷಣ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ಒದಗಿಸಬೇಕು. ಮುಂಚಿನ ಪ್ರಸ್ತಾಪದಂತೆ ನಿಗಮವು ಕೇವಲ ಉನ್ನತ ಶಿಕ್ಷಣಕ್ಕೆ ಮಾತ್ರ ಹಣಕಾಸನ್ನು ನೀಡಿತು. ಆದರೆ ಶಿಕ್ಷಣ ಹಕ್ಕಿಗೆ (ಅಂದರೆ, ಶಾಲಾ ಶಿಕ್ಷಣ) ಹಣಕಾಸು ನೀಡುವುದನ್ನು ಕೂಡ ರಾಷ್ಟ್ರೀಯ ಶಿಕ್ಷಣ ಹಣಕಾಸು ನಿಗಮದ ಆದೇಶದಲ್ಲಿ ಸೇರಿಸಬೇಕೆಂದು

ಸಚಿವಾಲಯ ಸೂಚಿಸಿದೆ. ನಿಗಮದ ಆದೇಶವು ಕಾನೂನಿನಡಿಯಲ್ಲಿ ಗುರುತಿಸಲ್ಪಟ್ಟ ಶೈಕ್ಷಣಿಕ ಸಂಸ್ಥೆಗಳಿಗೆ ನೇರ ಹಣಕಾಸನ್ನು ನೀಡುತ್ತದೆ ಹಾಗೂ ಯಾವುದೇ ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳಿಗೆ ದಾಖಲಾತಿಯನ್ನು ಹೆಚ್ಚಿಸಲು ಹಣಕಾಸು ಒದಗಿಸುತ್ತದೆ. ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ, ಅಭಿವೃದ್ಧಿ ಅಥವಾ ಪ್ರಚಾರಕ್ಕಾಗಿ ಮರುಪಾವತಿ ಮಾಡುವ ಮೂಲಕ ನಿಗಮವು ಯಾವುದೇ ನಿಗದಿತ ಸಾರ್ವಜನಿಕ ವಲಯದ ಬ್ಯಾಂಕಿಗೆ ಸಾಲವನ್ನು ನೀಡಬಹುದು. ಶಿಕ್ಷಣ ಸಂಸ್ಥೆಗೆ ದೇಣಿಗೆ ಅಥವಾ ಕೊಡುಗೆಗಳ ಮೂಲದಿಂದ ಶೇ. 25ರಷ್ಟು ಯೋಜನೆಯ ವೆಚ್ಚದೊಂದಿಗೆ ರಿಯಾಯಿತಿ ದರದಲ್ಲಿ ಸಾಲ ದೊರೆಯುತ್ತದೆ. ಅಲ್ಲದೆ, ಹಿಂದುಳಿದ ಪ್ರದೇಶಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು, ಸಾಲಗಳು ಅಗ್ಗವಾಗಿ ದೊರೆಯುತ್ತವೆ ಎಂದು ಪ್ರಸ್ತಾಪಿಸಲಾಗಿದೆ. ಇಂತಹ ಸಾಲ ಅಥವಾ ಮರುಪಾವತಿಗಾಗಿ ನಿಗಮವು ಸರ್ಕಾರದ ಮೂಲಗಳಿಗಿಂತ ಹೆಚ್ಚಾಗಿ ಮಾರುಕಟ್ಟೆ ಬಂಡವಾಳದಿಂದ ಹಣವನ್ನು ಸಂಗ್ರಹಿಸಿದಾಗ ಪ್ರಾಥಮಿಕ ಶಿಕ್ಷಣ ನಿಧಿಯ ಹೊದಿಕೆಗೆ ಹೆಚ್ಚುವರಿಯಾಗಿರುತ್ತದೆ.

ಅಂತಿಮವಾಗಿ, ಹಣಕಾಸು ಸಚಿವರು ಸಾಮಾಜಿಕ ವಲಯ ಯೋಜನೆಗಳ ಮೂಲ ಸೌಕರ್ಯ ವೆಚ್ಚಗಳನ್ನು ಪೂರೈಸಲು ಮುಂದಿನ ಮೂರು ವರ್ಷಗಳಲ್ಲಿ (2010–2013) ಪ್ರಮುಖ ಸಾರ್ವಜನಿಕ ವಲಯ ಉದ್ಯಮಗಳಲ್ಲಿ ಹೂಡಿಕೆಯಿಂದ ಬಂದಂತಹ ಆದಾಯದ ಒಂದು ಭಾಗವನ್ನು ಹೊಡಬೇಕೆಂದು ಘೋಷಿಸಿದ್ದಾರೆ. ಈ ಹಂಚಿಕೆಯು ಭಾಗಶಃ ಶಿಕ್ಷಣ ಹಕ್ಕಿನಿಂದ ಉಂಟಾದ ಹೆಚ್ಚುವರಿ ವೆಚ್ಚಗಳನ್ನು ಪೂರೈಸಲು ಸಹಕರಿಸುತ್ತದೆ.

4. ಮುಕ್ತಾಯದ ಅಭಿಪ್ರಾಯಗಳು

ಭಾರತದಲ್ಲಿ 1990ರ ದಶಕದ ಆರಂಭದಿಂದಲೂ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿಗಳ ಬಗೆಗಿನ ಕಾಳಜಿ ಬೆಳೆಯಿತು, ಭಾಗಶಃ 1991ರಲ್ಲಿ ತನ್ನ ಆರ್ಥಿಕ ಸುಧಾರಣೆಗಳನ್ನು ಪ್ರಾರಂಭಿಸಿದ ನಂತರ ಮತ್ತು ಭಾಗಶಃ ಜೊಮಿಟಿಯನ್ ಘೋಷಣೆಯ ಬೆಳಕಿನಲ್ಲಿ (1990) ಪ್ರಾಥಮಿಕ ಶಿಕ್ಷಣದ ಮೇಲೆ ಅಂತರರಾಷ್ಟ್ರೀಯ ಗಮನವನ್ನು ಗುರುತಿಸಿತು. ದ್ವಿಪಕ್ಷೀಯ ಮತ್ತು ಬಹುವಿಧದ ಸಂಸ್ಥೆಗಳಿಂದ ಭಾರತ ಸಾಲ ಪಡೆಯುವಲ್ಲಿ, ಮತ್ತು ಪ್ರಾಥಮಿಕ ಶಿಕ್ಷಣಕ್ಕಾಗಿ ಹೊಸ ಕೇಂದ್ರ ಸರ್ಕಾರ ಪ್ರಾರಂಭಿಸಿದ ಕಾರ್ಯಕ್ರಮಗಳಲ್ಲಿ ಈ ಕಾಳಜಿಯು ಜೊತೆಗೂಡುತ್ತದೆ. ಆದರೆ, ಸ್ವಾತಂತ್ರ ಬಂದ 40 ವರ್ಷಗಳ ನಂತರ ಹೊಸದಾಗಿ ಕಂಡುಬಂದ ಕಾಳಜಿ ಅನಕ್ಷರಸ್ಥರ ಬೃಹತ್ ಬಾಂದವ್ಯವನ್ನು ತೊರೆದಿದೆ, ಸರ್ಕಾರಿ ಶಾಲೆಗಳು ಶಿಕ್ಷಕರ ಮತ್ತು ಮೂಲಭೂತ ಸೌಕರ್ಯಗಳ ಗಂಭೀರ ಕೊರತೆಯನ್ನು ಎದುರಿಸುತ್ತಿವೆ, ಶಿಕ್ಷಕರ ಗುಣಮಟ್ಟ ಮತ್ತು ಶಿಕ್ಷಕರ ಬದ್ಧತೆಯ ಸುತ್ತ ಸಾಕಷ್ಟು ಗಂಭೀರವಾದ ಪ್ರಶ್ನೆಗಳಿವೆ.

ಶಿಕ್ಷಣ ಹಕ್ಕಿನ ಕಾಯಿದೆ ಸರಿಯಾದ ಪ್ರತಿಕ್ರಿಯೆಯಾಗಿತ್ತು, ಆದರೆ ಕಾಯಿದೆಯ ಅತ್ಯುತ್ತಮ ಭಾಗವನ್ನು ಅಂತಿಮವಾಗಿ 2000ರ ದಶಕದಲ್ಲಿ ಜಾರಿಗೆ ತರಲಾಯಿತು. 2002ರಲ್ಲಿ ಇದರ ಆರಂಭಿಕ ಆವೃತ್ತಿ ಪರಿಚಯಿಸಲ್ಪಟ್ಟಿದ್ದರೂ ಕೂಡ, ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದ ಕಾಯಿದೆಯನ್ನು ಶಾಲೆಗಳಿಗೆ ನಿರ್ದಿಷ್ಟವಾದ ನಿಯಮಗಳೊಂದಿಗೆ, ದಶಕದ ಉತ್ತರಾರ್ಧದಲ್ಲಿ ಮಾತ್ರ ಅಭಿವೃದ್ಧಿ ಪಡಿಸಲಾಯಿತು ಹಾಗೂ ಕಾಯಿದೆಯು ಜೂನ್ 2009ರವರೆಗೆ ಜಾರಿಗೆ ಬರಲು ಸಾಧ್ಯವಾಗಲಿಲ್ಲ.

ನಾವು ಶಿಕ್ಷಣ ಹಕ್ಕು ಕಾಯಿದೆಯ ದೃಢ ಬೆಂಬಲಿಗರಾಗಿದ್ದರೂ ಸಹ, ಶಿಕ್ಷಣ ಹಕ್ಕು ಕಾಯಿದೆಯಲ್ಲಿನ ವಿಷಯ ಕುರಿತು ಹಲವಾರು ಆತಂಕಗಳನ್ನು ನಾವು ಈ ಲೇಖನದಲ್ಲಿ ವ್ಯಕ್ತಪಡಿಸಿದ್ದೇವೆ. ಈ ಕಳವಳಗಳ ಹೊರತಾಗಿಯೂ, ಶಿಕ್ಷಣ ಹಕ್ಕು ಕಾಯಿದೆಯ ಹಣಕಾಸಿನ ಸುತ್ತಲೂ ಬಗೆಹರಿಸಲಾಗದ ಗಂಭೀರ ಸಮಸ್ಯೆಗಳಿವೆ. ಪ್ರಾಥಮಿಕ ಶಿಕ್ಷಣದ ಪ್ರವೇಶವು ಸಾರ್ವತ್ರಿಕವಾಗಿ ಮಾರ್ಪಟ್ಟಿದೆ, ಆದರೆ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಣದಲ್ಲಿ (ತರಗತಿಗಳು 6–8) ಒಟ್ಟು ದಾಖಲಾತಿ ಅನುಪಾತವು ಇನ್ನು 100 ಆಗಿಲ್ಲ.

ಭಾರತದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವಿಕೆಯ ವಿಳಂಬವು ಗಂಭೀರವಾಗಿದೆ ಮತ್ತು ಕಳೆದ ದಶಕದಲ್ಲಿ ವಿಶ್ವದ ಯಾವುದೇ ದೊಡ್ಡ ಆರ್ಥಿಕತೆಯಂತೆ ಭಾರತೀಯ ಆರ್ಥಿಕತೆಯು ಎರಡನೇ ಅತಿ ವೇಗದ ಆರ್ಥಿಕ ಬೆಳವಣಿಗೆಯನ್ನು ಅನುಭವಿಸಿದೆ. ಪ್ರಾಥಮಿಕ ಶಿಕ್ಷಣ ಮತ್ತು ಹಿರಿಯ ಪ್ರಾಥಮಿಕ ದಾಖಲಾತಿಗಳ ವೇಗದಲ್ಲಿ ತ್ವರಿತ ಸುಧಾರಣೆಗಳಿಲ್ಲದೆ ಅಂತರ್ಗತ ಬೆಳವಣಿಗೆಯು (11ನೇ ಪಂಚವಾರ್ಷಿಕ ಯೋಜನೆಯ ಉದ್ದೇಶ) ಅಸಂಭವವಾಗಿದೆ.

ಆದಾಗ್ಯೂ, ಪ್ರಾಥಮಿಕ ಶಿಕ್ಷಣಕ್ಕಾಗಿ ಹಣದ ಅವಶ್ಯಕತೆ ಹೆಚ್ಚಾಗುತ್ತದೆ, ಶಿಕ್ಷಣ ಹಕ್ಕು ಕಾಯಿದೆಯ ಅಂಗೀಕಾರಕ್ಕೆ ನಾವು ದನ್ಯವಾದಗಳನ್ನು ಹೇಳಲೇ ಬೇಕು, ಕಾರಣ ಸಂಪನ್ಮೂಲ ನಿರ್ಬಂಧಗಳು ಬಿಗಿಯಾಗಿವೆ. 2008ರ ಅಂತ್ಯದಿಂದ ಆರಂಭವಾದ ಜಾಗತಿಕ ಆರ್ಥಿಕ ಬಿಕ್ಕಟ್ಟು ಭಾರತ ಸರ್ಕಾರದ ಹಣಕಾಸಿನ ನಿರ್ಬಂಧಗಳನ್ನು ಬಿಗಿಗೊಳಿಸಿರುವುದರಿಂದ ಆರ್ಥಿಕ ಬೆಳವಣಿಗೆಯನ್ನು ಕಾಪಾಡಿಕೊಳ್ಳಲು ಹಣಕಾಸಿನ ಪ್ರಚೋದನೆಗಳನ್ನು ಕೈಗೊಳ್ಳಬೇಕಿದೆ. ಮಧ್ಯಮ ಮಟ್ಟದ ಆರ್ಥಿಕ ಬೆಳವಣಿಗೆಯು ಶಿಕ್ಷಣದಲ್ಲಿ ಬಂಡವಾಳ ಹೂಡಲು ತೆರಿಗೆ ಸಂಪನ್ಮೂಲಗಳನ್ನು ಉತ್ಪಾದಿಸುತ್ತದೆಯಾದರೂ ಶಿಕ್ಷಣದ ಪ್ರತಿಯೊಂದು ಹಂತದ ಅಂದರೆ ಪ್ರಾಥಮಿಕ, ಮಾಧ್ಯಮಿಕ, ತಾಂತ್ರಿಕ ಹಾಗೂ ಔದ್ಯೋಗಿಕ ಮತ್ತು ಉನ್ನತ ಶಿಕ್ಷಗಳ ಬೇಡಿಕೆಗಳು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯ ಅಗತ್ಯತೆಗಳೊಂದಿಗೆ ಏಕಕಾಲದಲ್ಲಿ ಬೆಳೆಯುತ್ತಿವೆ. ಆದ್ದರಿಂದ, ಯಾವುದೇ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಬಾಹ್ಯ ಸಂಪನ್ಮೂಲಗಳನ್ನು ಹುಡುಕುವ ಬಗ್ಗೆ ಕೇಂದ್ರ ಸರ್ಕಾರವು ಕಠಿಣವಾಗಿ ಯೋಚಿಸುವುದರ ಜೊತೆಗೆ ಖಾಸಗಿ ಸಾರ್ವಜನಿಕ ಪಾಲುದಾರಿಕೆಗೆ ಸಾಧ್ಯತೆಗಳನ್ನು ಅನ್ವೇಷಿಸಬೇಕಾಗುತ್ತದೆ. ಇದರ ಜೊತೆಗೆ, ಮುಂದಿನ ಮೂರು ವರ್ಷಗಳಲ್ಲಿ (2010–2013) ಪ್ರಮುಖ ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಹೂಡಿಕೆಯಿಂದ ಉತ್ಪತ್ತಿಯಾಗುವ ಆದಾಯದಲ್ಲಿ ಭಾಗಶಃ ಹಣವನ್ನು ಸಾಮಾಜಿಕ ವಲಯದಲ್ಲಿನ ಮೂಲಭೂತ ಸೌಕರ್ಯಗಳಿಗೆ ಮೀಸಲಿಡಲಾಗುವುದು ಎಂದು ಕೇಂದ್ರ ಸರ್ಕಾರ ಘೋಷಿಸಿದೆ: ಆದಾಗ್ಯೂ ಶಿಕ್ಷಣ ಹಕ್ಕು ಆಧಾರಿತ ಮೂಲಭೂತ ಸೌಕರ್ಯಗಳ ಹೆಚ್ಚುವರಿ ವೆಚ್ಚಗಳನ್ನು ಪೂರೈಸಲು ಈ ಹಂಚಿಕೆಯು ಸಾಕಾದರೂ ಈ ಸಮಸ್ಯೆಯು ಆಗೆಯೇ ಉಳಿದಿದೆ. ಖಾಸಗಿ–ಸಾರ್ವಜನಿಕ ಮಾದರಿಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ವಿಸ್ತರಿಸಲು ಪ್ರಾಥಮಿಕ ಶಿಕ್ಷಣಕ್ಕಾಗಿ ಸರ್ಕಾರಿ ಸಂಪನ್ಮೂಲಗಳನ್ನು ಬಿಡುಗಡೆ ಮಾಡಬಹುದು. ಜೊತೆಗೆ, ರಾಷ್ಟ್ರೀಯ ಶಿಕ್ಷಣ ಹಣಕಾಸು ನಿಗಮವು ಉನ್ನತ ಶಿಕ್ಷಣಕ್ಕೆ ಹಣಕಾಸು ಪೂರೈಸುವ ತನ್ನ ಉದ್ದೇಶದ ಜೊತೆಗೆ, ಶಾಲಾ ಶಿಕ್ಷಣದಲ್ಲಿ ಹೂಡಿಕೆಗೆ ಲಭ್ಯವಿರುವ ಸಂಪನ್ಮೂಲಗಳನ್ನು ಹೆಚ್ಚಿಸಲು ಬಂಡವಾಳ ಮಾರುಕಟ್ಟೆಗಳಿಂದ ಸಂಪನ್ಮೂಲಗಳನ್ನು ಹೆಚ್ಚಿಸಬೇಕಾಗಬಹುದು.